ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಮ.ಗ್ರಾ.ಸ./1068/2026 ದಿನಾಂಕ: 02.11.2026
E-2338905

ಸುತ್ತೋಲೆ

ವಿಷಯ : ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 14 ನವಂಬರ್ 2026 ರಿಂದ 24 ಜನವರಿ 2027 ರವರೆಗೆ, 10 ವಾರಗಳ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಗ್ರಾಮ ಪಂಚಾಯತಿಗಳಲ್ಲಿ ಒಂದು ದಿನ "ಮಕ್ಕಳ ವಿಶೇಷ ಗ್ರಾಮ ಸಭೆ" ನಡೆಸುವ ಕುರಿತು.

ಉಲ್ಲೇಖ :
1. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಅಧ್ಯಾಯ IIರ ಪ್ರಕರಣ 3(ಎಚ್)(2)(i).
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 367 ಗ್ರಾಪಂಅ 2006 ದಿನಾಂಕ 18-09-2006
3. ಸರ್ಕಾರದ ಸುತ್ತೋಲೆ ಸಂಖ್ಯೆ:ಕಪಂರಾಆ/ ಅಭಿವೃದ್ಧಿ/93/ 2020 ದಿನಾಂಕ 04-11-2020 ಮತ್ತು ದಿನಾಂಕ 02-02-2021
4. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ ಅಭಿವೃದ್ಧಿ/ 144/ 2021 ದಿನಾಂಕ 30-10-2021
5. ಸರ್ಕಾರದ ಸುತ್ತೋಲೆ ಸಂಖ್ಯೆ:ಕಪಂರಾಆ / ಅಭಿವೃದ್ಧಿ /552/2022 ದಿನಾಂಕ 02-11-2022
6. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ ಅಭಿವೃದ್ಧಿ/ 556/2023 ದಿನಾಂಕ 07-11-2023
7. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ ಅಭಿವೃದ್ಧಿ/556/2024 ದಿನಾಂಕ 12-11-2024
8. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ ಅಭಿವೃದ್ಧಿ/ ಮ.ಗ್ರಾ.ಸ/ 1073/ 2025 ದಿನಾಂಕ 07-11-2025

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಮಕ್ಕಳ ಭಾಗವಹಿಸುವಿಕೆ ಹಕ್ಕು ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಗಳಿಂದ ಮಕ್ಕಳ ಗ್ರಾಮ ಸಭೆಯನ್ನು ನಡೆಸಲು ಉಲ್ಲೇಖ(1) ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಅಧ್ಯಾಯ II ರ ಪ್ರಕರಣ 3(ಎಚ್)(2)(I) (2015ರ ತಿದ್ದುಪಡಿಯಂತೆ)ರಲ್ಲಿ ನಿರ್ದೇಶಿಸಿರುವಂತೆ ಪ್ರಮುಖವಾದ ನಿಲುವನ್ನು ತೆಗೆದುಕೊಂಡಿದೆ. ಇದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989, ಭಾರತದ ಸಂವಿಧಾನದಲ್ಲಿ ಮಕ್ಕಳಿಗಿರುವ ಹಕ್ಕುಗಳನ್ನು ಮಾನ್ಯ

ಮಾಡುವುದರಲ್ಲಿ ಮಹತ್ತರವಾದ ಹೆಜ್ಜೆಯಾಗಿದೆ. 2006ರಲ್ಲಿ ಉಲ್ಲೇಖ (2)ರ ಸುತೋಲೆಯನ್ನು ಹೊರಡಿಸುವುದರ ಮೂಲಕ ಗ್ರಾಮೀಣಾಭಿವೃದ್ಧಿಯಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ನೀಡಲಾಗಿದೆ. 2006ರಿಂದ ಪ್ರತಿ ವರ್ಷವೂ ಮಕ್ಕಳ ಗ್ರಾಮ ಸಭೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ಭಾರತ ಸರ್ಕಾರವು, ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು–2030ನ್ನು ಒಪ್ಪಿಕೊಂಡಿದ್ದು, ಮಕ್ಕಳ ಆರೋಗ್ಯ ರಕ್ಷಣೆ, ಶಿಕ್ಷಣ ಅಭಿವೃದ್ಧಿ ಸಾಧನೆ ಹಾಗೂ ಹಸಿವು, ತಾರತಮ್ಯ ಮತ್ತು ಶೋಷಣೆ ಕೊನೆಗೊಳಿಸುವುದಕ್ಕೆ ಬದ್ಧವಾಗಿದೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಸಮಗ್ರ ಅಭಿವೃದ್ಧಿಯ ಅಂಶಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ '**ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ**' ಪಂಚಾಯತಿಗಳನ್ನಾಗಿಸಲು ಉಲ್ಲೇಖ(3)ರ ಸುತ್ತೋಲೆಯ ಮೂಲಕ 2020ರಿಂದ ಪ್ರತಿ ವರ್ಷವೂ **'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ'ವನ್ನು** ಆಯೋಜಿಸಿ, ಈ ಅವಧಿಯಲ್ಲಿ ಒಂದು ದಿನ ಮಕ್ಕಳ ಗ್ರಾಮ ಸಭೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ಮುಂದುವರೆದು, ಉಲ್ಲೇಖಿತ(3)ರಿಂದ(8)ರ ಸುತ್ತೋಲೆಗಳಲ್ಲಿ ವಿವರವಾದ ಮಾರ್ಗಸೂಚಿ ನೀಡಲಾಗಿರುತ್ತದೆ. 2026-27ನೇ ಸಾಲಿನಲ್ಲಿ 14 ನವಂಬರ್ 2026ರಿಂದ 24 ಜನವರಿ 2027 ರವರೆಗೆ, 10 ವಾರಗಳ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಗ್ರಾಮ ಪಂಚಾಯತಿಗಳಲ್ಲಿ ಒಂದು ದಿನ "ಮಕ್ಕಳ ವಿಶೇಷ ಗ್ರಾಮ ಸಭೆ"**ಯನ್ನು ಈ ಕೆಳಗೆ ವಿವರಿಸಿರುವಂತೆ ನಡೆಸಲು ನಿರ್ಣಯಿಸಲಾಗಿದೆ.

1. **ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಮತ್ತು ಮಕ್ಕಳ ಗ್ರಾಮ ಸಭೆಯ ಪೂರ್ವ ಸಿದ್ಧತೆ:**
   - **ಪೂರ್ವ ತಯಾರಿ:**
     - 2025-2026 ಮಕ್ಕಳ ಗ್ರಾಮ ಸಭೆಯ ನಡಾವಳಿಗಳನ್ನು ಪರಾಮರ್ಶಿಸಿ, ಸದರಿ ಸಭೆಯಲ್ಲಿನ ನಿರ್ಣಯಗಳ ಜಾರಿಗಾಗಿ ತೆಗೆದುಕೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಿದ್ಧಪಡಿಸುವುದು, ಅದನ್ನು ಸ್ಥಳೀಯ ಸ್ವ ಸಹಾಯ ಸಂಘಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳೊಂದಿಗೆ ಮುಂಚಿತವಾಗಿ ಹಂಚಿಕೊಂಡು ಅವರುಗಳ ಪ್ರತಿಕ್ರಿಯೆ ಮತ್ತು ಶಿಫಾರಸ್ಸುಗಳನ್ನು ಪಡೆದು ಅಂತಿಮಗೊಳಿಸುವುದು. ಸದರಿ ವರದಿಯನ್ನು 2026-27ರ ಸಾಲಿನ ಮಕ್ಕಳ ಗ್ರಾಮ ಸಭೆಯಲ್ಲಿ ಪ್ರಸ್ತುತ ಪಡಿಸುವುದು.
     - ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮಕ್ಕಳ ಗ್ರಾಮ ಸಭೆ ನಡೆಸಲು ದಿನಾಂಕವನ್ನು ನಿಗದಿಗೊಳಿಸುವುದು.

   - **ಪೂರ್ವ ಸಿದ್ಧತಾ ಸಭೆ:** "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ನಡೆಸುವ ಕುರಿತು ಪೂರ್ವಸಿದ್ಧತೆಗಾಗಿ ಗ್ರಾಮ ಪಂಚಾಯತಿ ಮಟ್ಟದ, ಮಕ್ಕಳಿಗೆ ಸಂಬಂಧಿಸಿದಂತೆ ಇರುವ ಉಪ ಸಮಿತಿಗಳು /ಸಮಿತಿಗಳಾದ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ

ಸಮಿತಿ, ಬಾಲ ವಿಕಾಸ ಸಮಿತಿ, ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ ಸಲಹಾ ಸಮಿತಿ, ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಆರೋಗ್ಯ, ಪೌಷ್ಟಿಕತೆ ಮತ್ತು ನೈರ್ಮಲ್ಯ ಸಮಿತಿಗಳ ಪ್ರತಿನಿಧಿಗಳ ಮತ್ತು ವಿವಿಧ ಇಲಾಖೆ/ಇಲಾಖೇತರ ಭಾಗೀದಾರರ ಸಭೆಯನ್ನು **ಅನುಬಂಧ-ಎ** ರಲ್ಲಿ ತಿಳಿಸಿರುವ ಅವಧಿಯೊಳಗೆ ನಡೆಸುವುದು ಹಾಗೂ ಈ ಸಭೆಯಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ನೀಡುವುದು. **14 ನವೆಂಬರ್ 2026 ರಿಂದ 24 ಜನವರಿ 2027ರವೆಗೆ** ಗ್ರಾಮ ಪಂಚಾಯತಿಯಿಂದ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ಆಯೋಜಿಸುವ ಕುರಿತು ಚರ್ಚಿಸಿ 10 ವಾರಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು, ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಧಿಸಬೇಕಾದ ಗುರಿಗಳ ಕುರಿತು ತಾತ್ಕಾಲಿಕ ದಿನಾಂಕಗಳೊಂದಿಗೆ ವಿವರವಾದ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು ಹಾಗೂ ರೂಪಿಸಲಾದ ಕಾರ್ಯಕ್ರಮ/ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವುದು. (**ಅನುಬಂಧ-ಎ** ಮಾದರಿ ವೇಳಾಪಟ್ಟಿ ಮತ್ತು **ಅನುಬಂಧ-ಬಿ** ಸಾಧಿಸಬೇಕಾದ ಗುರಿಗಳನ್ನು ನಮೂದಿಸಲಾಗಿದೆ).

- **ಬಾಲ ಮಿತ್ರ:** ಈ ಹಿಂದಿನ ಸಾಲುಗಳಲ್ಲಿ ತಿಳಿಸಿರುವಂತೆ ಪೂರ್ವ ತಯಾರಿ ಸಭೆಯಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಲ್ಲಿ ಇರುವ ಒಬ್ಬ ಸದಸ್ಯರನ್ನು "**ಪಂಚಾಯತಿ ಬಾಲ ಮಿತ್ರ**" ಎಂದು ಘೋಷಿಸುವುದು. (ಅವರು ನಿರ್ವಹಿಸಬೇಕಾದ ಕಾರ್ಯಗಳನ್ನು ಹಿಂದಿನ ಸುತ್ತೋಲೆಗಳಲ್ಲಿ ತಿಳಿಸಲಾಗಿರುತ್ತದೆ.)

- **ಮಕ್ಕಳ ಸ್ಥಿತಿ:** ಪ್ರತಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಪರಿಸ್ಥಿತಿಯನ್ನು (2025-2026ನೇ ಸಾಲಿನ, ಮಾರ್ಚ್ 2026 ಅಂತ್ಯದವರೆಗೆ ಇರುವಂತೆ) **ಅನುಬಂಧ-ಸಿ** ಯಲ್ಲಿ ತಿಳಿಸಿರುವ ಅಂಶಗಳಿಗೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯವರು ಕೈಗೊಳ್ಳುವ ವಾರ್ಷಿಕ ಸಮೀಕ್ಷೆಯಿಂದ ಮಾಹಿತಿಯನ್ನು ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆಯರ ಸಿದ್ಧಪಡಿಸಿ ನೀಡಬೇಕು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಅದರ ಪ್ರತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕು. ಈ ಪಟ್ಟಿಯನ್ನು 24 ನವೆಂಬರ್ 2026 ರೊಳಗೆ ಸಿದ್ಧಪಡಿಸಬೇಕು. ಈ ಪಟ್ಟಿ ಆಧರಿಸಿ ಮಕ್ಕಳ ಗ್ರಾಮಸಭೆಯಲ್ಲಿ ಚರ್ಚೆ ನಡೆಸಲು ಸಂಬಂಧಿಸಿದವರಿಗೆ ಅನುಕೂಲವಾಗುತ್ತದೆ. [**ಅನುಬಂಧ-ಸಿ** ಯಲ್ಲಿ ಮಕ್ಕಳ ಸ್ಥಿತಿ ಕುರಿತಂತೆ ನಮೂನೆಯನ್ನು ನೀಡಲಾಗಿದೆ].

- ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ದ ಕುರಿತು ರಾಜ್ಯ ಮಟ್ಟದಿಂದ ಯುಟ್ಯೂಬ್ ಲೈವ್/ನೇರ ಪ್ರಸಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. (ತರಬೇತಿ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು) ಈ ಕಾರ್ಯಕ್ರಮದಲ್ಲಿ ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಬೇಕು. ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಇಬ್ಬರು ಮಕ್ಕಳು ಭಾಗವಹಿಸಲು ಕ್ರಮ ಕೈಗೊಳ್ಳುವುದು ಹಾಗೂ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೂ ಸಹ ಈ ತರಬೇತಿಯಲ್ಲಿ ಭಾಗವಹಿಸಲು ತಿಳಿಸುವುದು.

2. ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ ಅಂಗವಾಗಿ ಕೈಗೊಳ್ಳಬೇಕಾದ ಚಟುವಟಿಕೆ/ಕಾರ್ಯಕ್ರಮಗಳು:

2.1 ಚಟುವಟಿಕೆ/ಕಾರ್ಯಕ್ರಮಗಳು

- ಮಕ್ಕಳ ಜನನ ನೊಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ.
- ಪೌಷ್ಟಿಕ ಆಹಾರ ಕುರಿತು ಮಾರ್ಗದರ್ಶನ ಹಾಗೂ ಜಾಗೃತಿ.
- ಮಕ್ಕಳಿಗೆ ಚುಚ್ಚು ಮದ್ದು ಪ್ರಾಮುಖ್ಯತೆ.
- ಮಾನಸಿಕ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳು.
- ಶಾಲೆಯಿಂದ ಹೊರಗುಳಿದ 11ರಿಂದ 14 ವರ್ಷ ವಯಸ್ಸಿನ ಹದಿಹರೆಯದ ಬಾಲಕಿಯರ ಪಟ್ಟಿಯನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿ ಸಿದ್ಧಪಡಿಸಿ ಸಮುದಾಯ ಹಾಗೂ ಕುಟುಂಬದ ಸದಸ್ಯರೊಂದಿಗೆ ಸಮಾಲೋಚಿಸಿ ಚಾಲ್ತಿಯಲ್ಲಿರುವ ಯೋಜನೆಗಳ ಮೂಲಕ ಕ್ಷೇತ್ರ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಮುಂತಾದವುಗಳು ಸಮನ್ವಯದಿಂದ ಕೆಲಸ ನಿರ್ವಹಿಸಿ ಶಾಲೆ ಬಿಟ್ಟ ಬಾಲಕಿಯರನ್ನು ಪುನಃ ಶಾಲೆಗೆ ಸೇರಿಸಲು ಕ್ರಮ ಕೈಗೊಳ್ಳುವುದು.
- ಶಾಲೆಯಿಂದ ಹೊರಗುಳಿದ 14ರಿಂದ 18 ವರ್ಷ ವಯಸ್ಸಿನ ಪ್ರಾಯಪೂರ್ವ ಬಾಲಕಿಯರನ್ನು ಕೌಶಲ್ಯಾಭಿವೃದ್ಧಿ ತರಬೇತಿ ಅಥವಾ ತೆರೆದ ಶಾಲೆಗಳಿಗೆ ದಾಖಲಿಸಲು ಕ್ರಮವಹಿಸುವುದು .

2.2 ಕ್ರೀಡೆ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳು:

- ಮಕ್ಕಳ ಕ್ರೀಡಾಕೂಟ , ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಚಿತ್ರಕಲೆ ಕಾರ್ಯಕ್ರಮ.
- ಸ್ಥಳೀಯ ಸಾಂಪ್ರದಾಯಿಕ ಆಟೋಟಗಳು ಚಟುವಟಿಕೆಗಳು/ಜಾನಪದ ಗೀತೆಗಳು ಮತ್ತು ರಂಗಭೂಮಿ ಕಾರ್ಯಕ್ರಮಗಳು.
- ಶೈಕ್ಷಣಿಕ ಮತ್ತು ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮ.

2.3. ಜಾಗೃತಿ ಕಾರ್ಯಕ್ರಮಗಳು: ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಈ ಕೆಳಕಂಡ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

- ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ಮತ್ತು ಸಮುದಾಯಕ್ಕೆ ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ ನಿಷೇಧ ಮತ್ತು ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆ ನಿಷೇಧದ ಕುರಿತು ಉಪನ್ಯಾಸಗಳನ್ನು ನಡೆಸುವುದರ ಮೂಲಕ ಜಾಗೃತಿ ಮೂಡಿಸುವುದು. ಹಂತ ಹಂತವಾಗಿ ವಿವಿಧ ಸ್ಥಳಗಳಲ್ಲಿ ನಡೆಸುವುದು.
- ಮಕ್ಕಳಿಗೆ ವೈಜ್ಞಾನಿಕ ಮನೋಭಾವನೆ ಬೆಳೆಸಲು ವಿಜ್ಞಾನ ಕುರಿತು ಹಾಗೂ ಪವಾಡ ಬಯಲು ಮುಂತಾದ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ವಿವಿಧ ಸ್ಥಳಗಳಲ್ಲಿ ನಡೆಸುವುದು.

2.4. ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ ಅವಧಿಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಒತ್ತು ಕೊಡುವುದು. **(ಅನುಬಂಧ -ಬಿ ರಲ್ಲಿ ವಿವರಿಸಿದಂತೆ)**

3. ಮಕ್ಕಳ ವಿಶೇಷ ಗ್ರಾಮ ಸಭೆ: ದಿನಾಂಕ 14 ನವೆಂಬರ್ 2026 ರಿಂದ 24ಜನವರಿ 2027ರೊಳಗೆ **ಮಕ್ಕಳ ವಿಶೇಷ ಗ್ರಾಮ ಸಭೆಯನ್ನು** ಆಯಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ನಿಗದಿಪಡಿಸಲಾದ ದಿನಾಂಕದಂದು ಅಗತ್ಯ ಪೂರ್ವ ತಯಾರಿಯೊಂದಿಗೆ ಗ್ರಾಮ ಪಂಚಾಯತಿಗಳಿಂದ ನಡೆಸುವುದು.

3.1 ಮಕ್ಕಳ ಹಕ್ಕುಗಳ ರಕ್ಷಣೆಯ ಫೇಸ್ ಬುಕ್ ಪೇಜ್ ರಚಿಸುವುದು :

- ಪ್ರತಿ ಗ್ರಾಮ ಪಂಚಾಯತಿಯಿಂದ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ರಕ್ಷಣೆಯ ಫೇಸ್ ಬುಕ್ ಪೇಜ್ ರಚಿಸುವುದು. ಈ ಫೇಸ್ ಬುಕ್ ಪೇಜ್‌ಗೆ ತಮ್ಮ ಗ್ರಾಮ ಪಂಚಾಯತಿ ಹೆಸರಿನೊಂದಿಗೆ ಮಕ್ಕಳ ಹಕ್ಕುಗಳ ರಕ್ಷಣೆ, (ಉದಾ:- ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ರಕ್ಷಣೆ, ಜಿಲ್ಲೆ ಮತ್ತು ತಾಲ್ಲೂಕಿನ ಹೆಸರು) ಎಂಬ ಹೆಸರಿನ ಫೇಸ್‌ಬುಕ್ ಪೇಜ್ ಅನ್ನು ಆಯಾ ಶಾಲಾ ಶಿಕ್ಷಕರು, ಸ್ಥಳೀಯ ಸ್ವಯಂ ಸೇವಾ ಸಂಘಟನೆಗಳ ಮೂಲಕ ಮಕ್ಕಳಿಗೆ ತಿಳಿಯ ಪಡಿಸುವುದು. ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ವಸತಿ ನಿಲಯಗಳು, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ ಶುಚಿತ್ವ/ ನೈರ್ಮಲ್ಯ/ ರಸ್ತೆ, ಸಾರ್ವಜನಿಕ ಕಟ್ಟಡ, ಅಂಗನವಾಡಿ, ವಸತಿ ಸೌಲಭ್ಯ ಮುಂತಾದ ಕ್ಷೇತ್ರ ವಿಷಯಗಳಿಗೆ ಸಂಬಂಧಿಸಿದಂತೆ ಅವರ ಸಮಸ್ಯೆಗಳು/ಬೇಡಿಕೆಗಳು/ ಪ್ರಶ್ನೆಗಳನ್ನು ಪೇಸ್ ಬುಕ್ ಪೇಜ್‌ನಲ್ಲಿ ದಾಖಲಿಸಲು ಸಹಾಯ ಮಾಡುವುದು.
- ಗ್ರಾಮ ಪಂಚಾಯತಿಯಿಂದ ಈ ಫೇಸ್‌ಬುಕ್ ಪೇಜಿನಲ್ಲಿ ಮಕ್ಕಳಿಂದ ಬಂದ ಸಮಸ್ಯೆಗಳ/ ಪ್ರಶ್ನೆಗಳ/ಬೇಡಿಕೆಗಳ ಪಟ್ಟಿಯನ್ನು ನಮೂನೆ1ರಲ್ಲಿ ತಯಾರಿಸಿ ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸುವುದು.
- ಫೇಸ್‌ಬುಕ್ ಪೇಜ್‌ನಲ್ಲಿ ಮಕ್ಕಳಿಗೆ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ಪರಿಗಣಿಸಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸೂಕ್ತ ನಿರ್ಣಯ ತೆಗೆದುಕೊಳ್ಳುವುದು. ಮಕ್ಕಳ ಫೋಟೋಗಳನ್ನು ಅಪ್ಲೋಡ್ ಮಾಡುವಾಗ ವೈಯಕ್ತಿಕತೆಗೆ ಧಕ್ಕೆ ಬಾರದಂತೆ ಖಾಸಗಿತನವನ್ ಕಾಪಾಡುವುದು. ಈ ಹಿಂದೆ ಫೇಸ್‌ಬುಕ್ ಪೇಜ್ ಸೃಜಿಸಿದಲ್ಲಿ ಈ ಕುರಿತು ಪ್ರಚಾರಗೊಳಿಸಿ ಸದರಿ ಫೇಸ್‌ಬುಕ್ ಪೇಜ್‌ನ್ನು ಬಳಸುವುದು

3.2 ಮಕ್ಕಳ ದನಿ ಪೆಟ್ಟಿಗೆ:

- ಮಕ್ಕಳು ಮತ್ತು ಮಕ್ಕಳ ಪರವಾಗಿ ಆಸಕ್ತರು/ಹಿತೈಷಿಗಳು ಮಕ್ಕಳ ಸಮಸ್ಯೆ/ಬೇಡಿಕೆಗಳ/ಪ್ರಶ್ನೆಗಳನ್ನು ಬರೆದು ಹಾಕಲು ಅನುಕೂಲವಾಗುವಂತೆ 'ಮಕ್ಕಳ ದನಿ' ಪೆಟ್ಟಿಗೆಯನ್ನು ಆಕರ್ಷಣೀಯವಾಗಿ ಇರುವಂತೆ ತಯಾರಿಸುವುದು.
- ಈ 'ಮಕ್ಕಳ ದನಿ'ಪೆಟ್ಟಿಗೆಯ ಮೇಲೆ **ಮಕ್ಕಳ ಸಹಾಯವಾಣಿ ಸಂಖ್ಯೆ 1098/112** ಬರೆಯುವುದು ಹಾಗೂ ಪೆಟ್ಟಿಗೆಯ ಉದ್ದೇಶ ಮತ್ತು ಕೋರಿಕೆ ಪತ್ರದ ವಿವರವಿರುವ ಪೋಸ್ಟರ್‌ನ್ನು ಬರೆದು ಅಂಟಿಸುವುದು. **(ಅನುಬಂಧ-ಡಿ)**
- 'ಮಕ್ಕಳ ದನಿ' ಪೆಟ್ಟಿಗೆಯನ್ನು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಪ್ರತಿ ಗ್ರಾಮ/ವಾರ್ಡ್ ನಲ್ಲಿ ಮಕ್ಕಳಿಗೆ ಅನುಕೂಲವಾಗುವಂತೆ ಆಯಾ ಗ್ರಾಮಗಳಲ್ಲಿನ ಹೆಚ್ಚಿನ ಜನರು ಓಡಾಡುವ / ಸೇರುವ / ಜನ ಸಂದಣಿ ಇರುವ ಸ್ಥಳಗಳಾದ ಶಾಲೆ, ವಸತಿ ನಿಲಯ, ಅಂಗನವಾಡಿ ಕೇಂದ್ರ, ನ್ಯಾಯಬೆಲೆ ಅಂಗಡಿ, ಹಾಲು ಉತ್ಪಾದಕರ ಸಹಕಾರ ಸಂಘ, ಗ್ರಾಮ ಪಂಚಾಯತಿ ಅರಿವು ಕೇಂದ್ರ, ಗ್ರಾಮ ಪಂಚಾಯತಿ ಕಚೇರಿ ಇತ್ಯಾದಿ ಸಾರ್ವಜನಿಕ ಕಚೇರಿ/ಕೇಂದ್ರಗಳಲ್ಲಿ ಶಾಲಾ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಪೊಲೀಸ್ ಪ್ರತಿನಿಧಿ, ಸ್ಥಳೀಯ ಸ್ವ-ಸಹಾಯ ಸಂಘ, ಸ್ವಯಂ ಸೇವಾ ಸಂಘಟನೆಗಳ ಸಮನ್ವಯತೆಯೊಂದಿಗೆ ಇಡುವುದು.

- ಮಕ್ಕಳಿಂದ ಮತ್ತು ಮಕ್ಕಳ ಪರವಾಗಿ 'ಮಕ್ಕಳ ದನಿ' ಪೆಟ್ಟಿಗೆಯಲ್ಲಿ ಬರೆದು ಹಾಕಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಸ್ಥಳೀಯ ಪೊಲೀಸ್ ಪ್ರತಿನಿಧಿ ಮತ್ತು ಸ್ಥಳೀಯ ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆಗೆದು ಸಂಗ್ರಹಿಸಿ ನಮೂನೆ-1ರಲ್ಲಿ ಪಟ್ಟಿ ಮಾಡಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯ 03 ದಿನಗಳ ಮುಂಚಿತವಾಗಿ ಸಿದ್ಧಪಡಿಸಿ ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸುವುದು.

3.3 ಮಕ್ಕಳ ಕೋರಿಕೆ ಪತ್ರ:

- **ಅನುಬಂಧ-ಇ** ರಲ್ಲಿ ತಿಳಿಸಲಾದ **ಎ-3** ಅಳತೆಯ ಕೋರಿಕೆ ಪತ್ರವನ್ನು ಮುದ್ರಿಸಿ ದನಿ ಪೆಟ್ಟಿಗೆ ಇಟ್ಟಿರುವ ಸ್ಥಳಗಳಲ್ಲಿ ಅಂಟಿಸುವುದು ಮತ್ತು ಸಮುದಾಯಕ್ಕೆ ಲಭ್ಯವಾಗುವಂತೆ ಇರಿಸುವುದು.
- ಮಕ್ಕಳ ಕೋರಿಕೆ ಪತ್ರಗಳನ್ನು ಸಾಮಾಜಿಕ ಜಾಲ ತಾಣ, ವಾಟ್ಸಾಪ್, ಇತ್ಯಾದಿ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯಕ್ಕೆ ತಲುಪುವಂತೆ ಕ್ರಮವಹಿಸುವುದು.
- ಕೋರಿಕೆ ಪತ್ರ, ಆಯಾ ಸ್ಥಳೀಯ ಶಾಲಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಆರೋಗ್ಯ ಕಾರ್ಯಕರ್ತೆಯರು ಮತ್ತು ಬಾಲಮಿತ್ರರ ಹತ್ತಿರ ಲಭ್ಯವಿರುವಂತೆ ನೋಡಿಕೊಳ್ಳುವುದು.

- ಮಕ್ಕಳು ಮತ್ತು ಮಕ್ಕಳ ಪರ ವ್ಯಕ್ತಿಗಳು/ಹಿರಿಯರು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆ/ಬೇಡಿಕೆ/ಪ್ರಶ್ನೆಯನ್ನು ಕೋರಿಕೆ ಪತ್ರದಲ್ಲಿ ಬರೆದು ಮಕ್ಕಳ 'ಬಾಲ ಮಿತ್ರ', ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ ಶಿಕ್ಷಕ/ಶಿಕ್ಷಕಿಯರಿಗೆ ನೇರವಾಗಿ ಸಲ್ಲಿಸಲು ಕೂಡ ಅವಕಾಶವನ್ನು ಮಾಡುವುದು.

3.4 ವಾರ್ಡ್/ಗ್ರಾಮ ಮಟ್ಟದಲ್ಲಿ ಮಕ್ಕಳ ಗ್ರಾಮ ಸಭೆ:

- ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯ ಮೊದಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಮುಖ್ಯೋಪಾಧ್ಯಾಯರುಗಳ ಮುಖಾಂತರ ಒಬ್ಬ ಶಿಕ್ಷಕ/ಶಿಕ್ಷಕಿಯನ್ನು ಸಮನ್ವಯಾಧಿಕಾರಿಯನ್ನಾಗಿ ನೇಮಿಸುವುದು. ಈ ಸಮನ್ವಯ ಅಧಿಕಾರಿಯು ವಾರ್ಡ್/ ಗ್ರಾಮ ಹಂತದಲ್ಲಿ ಮಕ್ಕಳ ಜೊತೆ ಪೂರ್ವಭಾವಿ ಮಕ್ಕಳ ಹಕ್ಕುಗಳ ವಾರ್ಡ್/ ಗ್ರಾಮ ಸಭೆಯನ್ನು ಸ್ಥಳೀಯ ಸ್ವಸಹಾಯ ಸಂಘದ (SHG) 02 ಪ್ರತಿನಿಧಿಗಳ ಸಹಾಯದೊಂದಿಗೆ ನಡೆಸುವುದು.
- ಮಕ್ಕಳ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಶಾಲಾ/ ವಾರ್ಡ್/ ಗ್ರಾಮ ನಲ್ಲಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸಮಾನ ಅವಕಾಶ, ವಿಶೇಷವಾಗಿ ಶಾಲೆಯಿಂದ ಹೊರಗುಳಿದ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು), ವಿಶೇಷ ಚೇತನರು ಹಾಗೂ ಹೆಣ್ಣು ಮಕ್ಕಳು (18 ವರ್ಷ ಪೂರ್ಣಗೊಳಿಸದ) ಭಾಗವಹಿಸಿ ಚರ್ಚಿಸಲು ಅವಕಾಶ ನೀಡಬೇಕು. ಸಭೆಯನ್ನು ಮಕ್ಕಳಿಗೆ ಅನುಕೂಲವಾಗುವ ದಿನ ಮತ್ತು ಸಮಯಕ್ಕೆ ನಡೆಸುವುದು.

- ವಾರ್ಡ್/ಗ್ರಾಮ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಸಭೆಯ ಕುರಿತು ಸಾಕಷ್ಟು ಪ್ರಚಾರ ನೀಡಿ, ಪರಿಣಾಮಕಾರಿಯಾಗಿ ನಡೆಸಿ ಮಕ್ಕಳಿಂದ ಮೂಡಿಬಂದ ಅಥವಾ ಕೋರಿಕೆ ಪತ್ರದ ಮೂಲಕ ಬಂದ ಸಮಸ್ಯೆಗಳು/ಬೇಡಿಕೆಗಳ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆ-1ರಲ್ಲಿ ತಯಾರಿಸುವುದು.

- ವಾರ್ಡ್/ಗ್ರಾಮ ಮಟ್ಟದಿಂದ, ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಎಲ್ಲಾ ಮಕ್ಕಳನ್ನು ಪ್ರತಿನಿಧಿಸಲು ಶಾಲೆಗೆ ಹಾಜರಾಗುತ್ತಿರುವ, ಶಾಲೆಯಿಂದ ಹೊರಗುಳಿದ, ವಿಶೇಷ/ವಿಕಲಚೇತನ, ಅಲೆಮಾರಿ ಕುಟುಂಬಗಳ ಮಕ್ಕಳು ಸೇರಿದಂತೆ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು) ಪ್ರತಿನಿಧಿಸಲು ಕನಿಷ್ಟ ಇಬ್ಬರು ಬಾಲಕರು ಮತ್ತು ಇಬ್ಬರು ಬಾಲಕಿಯರನ್ನು ಮಕ್ಕಳಿಂದಲೇ ಗುರುತಿಸುವುದು. ಗುರುತಿಸಲಾದ ಈ ಬಾಲಕ ಮತ್ತು ಬಾಲಕಿಯರೊಂದಿಗೆ ಸಂಬಂಧಿಸಿದ ಶಿಕ್ಷಕರು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿಗದಿತ ದಿನಾಂಕದಂದು ನಡೆಯುವ ಮಕ್ಕಳ ಗ್ರಾಮ ಸಭೆಗೆ ಹಾಜರಾಗುವುದು ಮತ್ತು ವಾರ್ಡ್/ಗ್ರಾಮ ಮಟ್ಟದಲ್ಲಿ ಮಕ್ಕಳಿಂದ ಮೂಡಿಬಂದ ಸಮಸ್ಯೆಗಳ/ಬೇಡಿಕೆಗಳ ಪಟ್ಟಿಯನ್ನು ಮಂಡಿಸುವುದು.

- **ವಿಶೇಷ ಸೂಚನೆ:** ಪೂರ್ವ ತಯಾರಿ ಸಭೆಯಲ್ಲಿ ಸ್ಥಳೀಯ ಸ್ಥಿತಿಗತಿಗಳನ್ನು ಪರಿಗಣಿಸಿ ವಾರ್ಡ್/ಗ್ರಾಮ ಮಟ್ಟದ ಮಕ್ಕಳ ಸಭೆ ನಡೆಸುವ ಕುರಿತು ಸ್ಥಳೀಯವಾಗಿ ನಿರ್ಣಯ ತೆಗೆದುಕೊಳ್ಳುವುದು ಹಾಗೂ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಗೆ, ಮಕ್ಕಳ ಪ್ರಾತಿನಿಧ್ಯವನ್ನು ನಿರ್ಧರಿಸುವುದು.

3.5 ಗ್ರಾಮ ಪಂಚಾಯತಿ ಮಟ್ಟದಲ್ಲಿನ ಮಕ್ಕಳ ಗ್ರಾಮ ಸಭೆ:

- ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮಕ್ಕಳ ಗ್ರಾಮ ಸಭೆಗೆ ದಿನಾಂಕವನ್ನು ನಿಗದಿಪಡಿಸುವುದು.
- ಮಕ್ಕಳ ಗ್ರಾಮ ಸಭೆಯ ಕುರಿತು ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಚುನಾಯಿತ ಸದಸ್ಯರುಗಳಿಗೆ/ ಆಡಳಿತ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡಿ ಸಕ್ರಿಯವಾಗಿ ಭಾಗವಹಿಸಲು ಆಹ್ವಾನಿಸುವುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಭಾಗೀದಾರರಾದ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ, ಪೋಲಿಸ್ ಅಧಿಕಾರಿಗಳು, ಸ್ಥಳೀಯ ಸ್ವ ಸಹಾಯ ಸಂಘದ ಪ್ರತಿನಿಧಿಗಳು, ಯುವಕ/ಯುವತಿ ಮಂಡಳಿಗಳು, ಸ್ವಯಂ ಸೇವಾ ಸಂಸ್ಥೆಗಳಿಗೆ ಮುಂಚಿತವಾಗಿ ತಿಳಿಸುವುದು ಮತ್ತು ಈ ಎಲ್ಲಾ ಅಧಿಕಾರಿಗಳು ಮತ್ತು ಅಧಿಕಾರೇತರರು ಭಾಗವಹಿಸುವಂತೆ ನೋಡಿಕೊಳ್ಳುವುದು.
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ/ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಕ್ಕೆ ಮಾಹಿತಿ ನೀಡಿ ಆಹ್ವಾನಿಸುವುದು.
- ಶಾಲೆಗಳಲ್ಲಿರುವ ಮಕ್ಕಳ ಹಕ್ಕುಗಳ ಕ್ಲಬ್ ಪ್ರತಿನಿಧಿ, ಶಾಲಾ ಕ್ಯಾಬಿನೆಟ್‌ನ ಮುಖ್ಯಮಂತ್ರಿ, ಮಹಿಳಾ ಮತ್ತು ಮಕ್ಕಳ ರಕ್ಷಣೆ ಕಾವಲು ಸಮಿತಿಯ ಪ್ರತಿನಿಧಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರು, ಬಾಲವಿಕಾಸ ಸಮಿತಿ ಸದಸ್ಯರು, ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿಯ ಪ್ರತಿನಿಧಿ ಇವರುಗಳಿಗೆ ಮತ್ತು ಆಸಕ್ತ ಪೋಷಕರುಗಳಿಗೆ ಶಾಲಾ ಮುಖ್ಯೋಪಾಧ್ಯಾಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ (GPLF) ಮೂಲಕ ಮಾಹಿತಿಯನ್ನು ನೀಡಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ಹಾಜರಾಗುವಂತೆ ನೋಡಿಕೊಳ್ಳುವುದು.
- ಮಕ್ಕಳ ಗ್ರಾಮ ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳು, ಅಧಿಕಾರೇತರರು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಮಕ್ಕಳು (ವಾರ್ಡ್/ ಗ್ರಾಮ ಸಭೆಯಲ್ಲಿ ಗುರುತಿಸಲಾದ ಮಕ್ಕಳ ಪ್ರತಿನಿಧಿಗಳು) ಸೇರಿದಂತೆ ಸಭೆಯಲ್ಲಿ ಸೇರಬೇಕಾದ ಸಂಖ್ಯೆಯನ್ನು ಮೊದಲೇ ನಿಗದಿಗೊಳಿಸುವುದು.

- ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಭೆಯಲ್ಲಿ ಮಕ್ಕಳಿಗೆ ಮತ್ತು ಅಧಿಕಾರಿಗಳು ಹಾಗೂ ಅಧಿಕಾರೇತರರಿಗೆ ಕೂರಲು ವ್ಯವಸ್ಥೆ ಮಾಡುವುದು, ಮಾತನಾಡಲು ಧ್ವನಿವರ್ಧಕ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಹಾಗೂ ಶೌಚಾಲಯ ವ್ಯವಸ್ಥೆ ಇರಬೇಕು.
- ಭಾಗವಹಿಸುವವರಿಗೆ ಲಘು ಉಪಹಾರದ ವ್ಯವಸ್ಥೆಯನ್ನು ಮಾಡುವುದು.

3.6 ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳಿಂದ **ಅನುಬಂಧ-ಬಿ** ನಲ್ಲಿ ತಿಳಿಸಿರುವ ಸಾಧನೆಗೆ ಪೂರಕವಾದ ಚಟುವಟಿಕೆಗಳು, ವಸತಿ ನಿಲಯಗಳ ಸಮಸ್ಯೆಗಳು, ಇತರೆ ಸರ್ಕಾರಿ ಸೌಲಭ್ಯಗಳ ಲಭ್ಯತೆ ಹಾಗೂ ಗುಣಮಟ್ಟ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ನಿರ್ದಿಷ್ಟ ವಿಷಯಗಳ ಕುರಿತು ಚರ್ಚೆಗೆ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿ ಹಾಗೂ ಇಂತಹ ಸಮಸ್ಯೆಗಳನ್ನು ಪರಿಹರಿಸುವ ಸಲಹೆಗಳನ್ನು ಪಡೆಯುವುದು.

3.7 **ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳ ಹಕ್ಕುಗಳು ಮತ್ತು ಮಕ್ಕಳಿಗಾಗಿ ಇರುವ ಯೋಜನೆಗಳ ವಿವರಣೆ:** ಮಕ್ಕಳ ಗ್ರಾಮ ಸಭೆಯಲ್ಲಿ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಮತ್ತು ಇಲಾಖೇತರರು ಮಕ್ಕಳಿಗೆ ಈ ಕೆಳಕಂಡ ವಿಷಯಗಳ ಕುರಿತು ಅವರಿಗೆ ತಿಳಿಯುವ ಹಾಗೆ ಬಹಳ ಕಡಿಮೆ ಅವಧಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

- ಮಕ್ಕಳ ಹಕ್ಕುಗಳ ಬಗ್ಗೆ (ಬದುಕುವ ಹಕ್ಕು, ರಕ್ಷಣೆ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು) ಕುರಿತು.
- ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಗೆ ಸಂಬಂಧಿಸಿದಂತೆ ಇರುವ ಸೇವೆಗಳ ಬಗ್ಗೆ.
- ಸರ್ಕಾರದಿಂದ ಮಕ್ಕಳಿಗೆ ಲಭ್ಯವಿರುವ ಉಚಿತ ಶಿಕ್ಷಣ, ಪಠ್ಯಪುಸ್ತಕ, ಸಮವಸ್ತ್ರ, ಮತ್ತು ಶೂಗಳ ವಿತರಣೆ, ಮಧ್ಯಾಹ್ನದ ಬಿಸಿಯೂಟ, ಗ್ರಂಥಾಲಯ ಸೌಕರ್ಯ, ಕ್ರೀಡಾ ಚಟುವಟಿಕೆ, ವಸತಿ ನಿಲಯ, ಪ್ರಾಯೋಜನೆ (ಸ್ಪಾನ್ಸರ್‌ಶಿಪ್), ವಿದ್ಯಾರ್ಥಿ ವೇತನ ಮೊದಲಾದ ವಿಚಾರಗಳನ್ನು ಕುರಿತು ಮಾಹಿತಿ ನೀಡುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ, ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 2016ರ ತಿದ್ದುಪಡಿಯಂತೆ, ಜೀತ ಪದ್ಧತಿ ನಿಷೇಧ ಕಾಯ್ದೆ, ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ 2016, ವಿಶೇಷ ಚೇತನರ ಹಕ್ಕುಗಳ ಅಧಿನಿಯಮದ ಬಗ್ಗೆ ಹಾಗೂ ಚೈಲ್ಡ್ ಲೈನ್ 1098 / 112 ಮಕ್ಕಳ ಸಹಾಯವಾಣಿ ಬಗ್ಗೆ ತಿಳಿಸುವದು. ಮಹಿಳೆಯರಲ್ಲಿ ಹಾಗೂ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಮಾಹಿತಿಗಳನ್ನು ನೀಡಬೇಕು.
- ಸ್ಥಳೀಯ ಪೊಲೀಸ್ ಠಾಣೆಯ ಪ್ರತಿನಿಧಿಗಳು ಹಾಜರಿದ್ದು ತಮ್ಮಲ್ಲಿ "ತೆರೆದ ಮನೆ" (ಓಪನ್ ಹೌಸ್) ನಡೆಸುವ ದಿನಾಂಕದ ಮಾಹಿತಿಯನ್ನು ಹಂಚಿಕೊಳ್ಳಬೇಕು. ಮಕ್ಕಳ ಸಂರಕ್ಷಣಾ ಘಟಕದ ಸಿಬ್ಬಂದಿಯಿಂದ, ಅಂಗನವಾಡಿ ಮೇಲ್ವೀಚಾರಕರಿಂದ ಮಕ್ಕಳ ರಕ್ಷಣೆ ವಿಚಾರಗಳನ್ನು ವಿವರಿಸಬೇಕು.

- ಪ್ರಮುಖವಾಗಿ ವಿವಿಧ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಂದ ಬಾಲ್ಯ ವಿವಾಹಗಳು ಜರುಗುತ್ತಿರುವ ಕುರಿತು ಹಾಗೂ ಮಕ್ಕಳ ಸಾಗಣೆ, ದುಡಿಮೆಗೆ ಮಕ್ಕಳನ್ನು ದೂಡುವುದರ ವಿರುದ್ಧ ಜನಜಾಗೃತಿ ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸುವ ಕುರಿತು ವಿಶೇಷ ಮಾಹಿತಿಗಳನ್ನು ನೀಡಬೇಕು .

3.8 **ಮಕ್ಕಳ ವಿಶೇಷ ಗ್ರಾಮ ಸಭೆಯ ಮಾದರಿ ಕಾರ್ಯಸೂಚಿ:** ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಹೊರತು ಪಡಿಸಿ ಮಕ್ಕಳ ಗ್ರಾಮ ಸಭೆಯ ಕಾರ್ಯಸೂಚಿಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳು ಇರುವಂತೆ ಕ್ರಮವಹಿಸುವುದು.

- ಸ್ವಾಗತ ಮತ್ತು ಪ್ರಸ್ತಾವಿಕ ನುಡಿ.
- ವಿವಿಧ ಇಲಾಖೆಯ ಅಧಿಕಾರಿಗಳಿಂದ ಮಕ್ಕಳಿಗೆ ಸಂಬಂಧಿಸಿದ ಯೋಜನೆ/ ಕಾರ್ಯಕ್ರಮಗಳ ಕುರಿತು ಸಂಕ್ಷಿಪ್ತ ಮಾಹಿತಿ.
- ಹಿಂದಿನ ವರ್ಷದ ಮಕ್ಕಳ ಗ್ರಾಮ ಸಭೆಯ ನಿರ್ಣಯಗಳ ಅನುಪಾಲನಾ ವರದಿಯ ಮಂಡನೆ, ಚರ್ಚೆ ಹಾಗೂ ಅನುಷ್ಠಾನಗೊಳಿಸಲಾದ ಸಮಸ್ಯೆ/ಬೇಡಿಕೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು. (ಅನುಷ್ಠಾನಗೊಳಿಸಲಾಗದ ಸಮಸ್ಯೆ/ಬೇಡಿಕೆಗಳ ಬಗ್ಗೆ ಕಾರಣ ಹಾಗೂ ಮುಂದಿನ ಕ್ರಮದ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದು.)
- ಮಕ್ಕಳ ಸ್ಥಿತಿಗತಿಯ (**ಅನುಬಂಧ-ಸಿ** ನಲ್ಲಿ ಸಂಗ್ರಹಿಸಲಾದ ಮಾಹಿತಿ) ವಿವರಗಳನ್ನು ಮಂಡಿಸುವುದು, ಚರ್ಚಿಸಿ ಪರಿಹಾರಗಳನ್ನು ಪಡೆಯುವುದು.
- ಸಭೆಯಲ್ಲಿ ಭಾಗವಹಿಸಿದ ಮಕ್ಕಳಿಂದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳು.
- ಮಕ್ಕಳ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಕುರಿತು ಚರ್ಚಿಸಿ ಕ್ರೋಡೀಕರಿಸುವುದು ಹಾಗೂ ಪರಿಹಾರಕ್ಕೆ ನಿರ್ಣಯಗಳನ್ನು ತೆಗೆದುಕೊಳ್ಳುವುದು.

3.9 **ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ**

- ಮಕ್ಕಳ ಹಕ್ಕುಗಳ ವಾರ್ಡ್/ ಗ್ರಾಮ ಸಭೆಗಳಲ್ಲಿ ಮಕ್ಕಳಿಂದ ವ್ಯಕ್ತಪಡಿಸಲಾದ, ಫೇಸ್ ಬುಕ್ ಪೇಜಿನಲ್ಲಿ ಮೂಡಿಬಂದ, ನೇರವಾಗಿ ಕೋರಿಕೆ ಪತ್ರದ ಮೂಲಕ ಸಲ್ಲಿಸಲಾದ ಮತ್ತು ಮಕ್ಕಳ ದನಿ ಪೆಟ್ಟಿಗೆಯಿಂದ ಸಂಗ್ರಹಿಸಲಾದ ಸಮಸ್ಯೆ/ ಬೇಡಿಕೆಗಳ/ ಪ್ರಶ್ನೆಗಳ ಕುರಿತು ಈಗಾಗಲೇ ಸಿದ್ಧಪಡಿಸಿರುವ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುವುದು ಹಾಗೂ ಗ್ರಾಮ ಪಂಚಾಯತಿ ಮಕ್ಕಳ ಗ್ರಾಮ ಸಭೆಯಲ್ಲಿ ಮೂಡಿಬರುವ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳ ಕುರಿತು ಹಾಗೂ ಹಿಂದಿನ ಮಕ್ಕಳ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ಬಾಕಿ ಇರುವ ನಿರ್ಣಯಗಳನ್ನು ಸಭೆಯಲ್ಲಿ ಚರ್ಚಿಸಿ, ಕ್ರೋಡೀಕರಿಸಿ ಈ ಪಟ್ಟಿಯನ್ನು ಅಂತಿಮಗೊಳಿಸಬೇಕು. ಅಂತಿಮಗೊಳಿಸಲಾದ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳ ಪಟ್ಟಿಯನ್ನು ಸಂಬಂಧಿಸಿದ ಇಲಾಖಾ/ ಕ್ಷೇತ್ರವಾರು ವಿಂಗಡಿಸಿ **ನಮೂನೆ-1ರಲ್ಲಿ** ಅಂತಿಮ ಪಟ್ಟಿಯನ್ನು ತಯಾರಿಸುವುದು ಮತ್ತು ಸಭಾ ನಡವಳಿ ಪುಸ್ತಕ ಮತ್ತು ಪಂಚತಂತ್ರ-2.0 ದಲ್ಲಿ ದಾಖಲಿಸುವುದು.

- ಮಕ್ಕಳ ಗ್ರಾಮ ಸಭೆಯ ಅನುಸರಣೆಯ ದೃಷ್ಟಿಯಿಂದ ಒಂದೇ ಪುಸ್ತಕದಲ್ಲಿ ಈ ನಡವಳಿ ಮತ್ತು ಠರಾವುಗಳನ್ನು ಬರೆಯಬೇಕು ಮತ್ತು ಅದನ್ನೇ ಪ್ರತಿ ವರ್ಷದಲ್ಲೂ ಬಳಸಬೇಕು. ಹಿಂದಿನ ವರ್ಷಗಳಲ್ಲಿ ನಿರ್ವಹಿಸಿದ್ದಲ್ಲಿ ಅದೇ ಪುಸ್ತಕದಲ್ಲಿ ನಡವಳಿ ಮತ್ತು ಠರಾವುಗಳನ್ನು ಬರೆಯುವುದು.

- ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳ, ಅಧಿಕಾರೇತರರ ಮತ್ತು ಮಕ್ಕಳ ಸಹಿಗಳನ್ನು ಸಂಬಂಧಿಸಿದ ನಡವಳಿ/ ಹಾಜರಾತಿ ವಹಿಯಲ್ಲಿ ಪಡೆಯುವುದು.

- ಮಕ್ಕಳ ಗ್ರಾಮ ಸಭೆಯಲ್ಲಿ (ನಮೂನೆ-1) ಅಂತಿಮಗೊಳಿಸಲಾದ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಮಕ್ಕಳ ಗ್ರಾಮ ಸಭೆಯಲ್ಲಿಯೇ ಸಂಬಂಧಿಸಿದ ಅಧಿಕಾರಿಗಳಿಂದ ಬಗೆಹರಿಸಲು ಸಾಧ್ಯವಿರುವ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಬಗೆಹರಿಸುವುದು ಹಾಗೂ ಬಗೆಹರಿಸಲಾದ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಪರಿಹರಿಸಲು ಕ್ಷೇತ್ರವಾರು ಮತ್ತು ಇಲಾಖಾವಾರು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಂದ ತೆಗೆದುಕೊಳ್ಳಬೇಕಾದ ಪರಿಹಾರ, ಕ್ರಮ ಮತ್ತು ಕಾಲಾವಧಿಯನ್ನು ನಿಗದಿಗೊಳಿಸಿ ಕ್ರಿಯಾಯೋಜನೆಯನ್ನು ಈ ಪತ್ರದೊಂದಿಗೆ ನೀಡಲಾದ ನಮೂನೆ-2ರಲ್ಲಿ ತಯಾರಿಸುವುದು. ಸಭಾ ನಡವಳಿ ಮತ್ತು ತಯಾರಿಸಲಾದ ಕ್ರಿಯಾ ಯೋಜನೆಯ ವಿವರಗಳನ್ನು ಪಂಚತಂತ್ರ 2.0 ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು.

- ಮಕ್ಕಳ ಗ್ರಾಮಸಭೆಯ ನಡವಳಿಗಳು ಮತ್ತು ಠರಾವುಗಳ ಪ್ರತಿಯನ್ನು ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ, ವಸತಿ ನಿಲಯಗಳಿಗೆ, ಅಂಗನವಾಡಿ ಕೇಂದ್ರಗಳಿಗೆ ಮತ್ತು ಆರೋಗ್ಯ ಕೇಂದ್ರಗಳಿಗೆ ಹಾಗೂ ಸ್ವಯಂಸೇವಾ ಸಂಘಟನೆಗಳಿಗೆ ಒಂದು ತಿಂಗಳ ಒಳಗೆ ಕಳುಹಿಸಿ ಅವರಿಂದ ಪ್ರತಿಕ್ರಿಯೆಗಳನ್ನು ತೆಗೆದುಕೊಂಡು ದಾಖಲಿಸುವುದು.

- ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆದ ಮಕ್ಕಳ ಗ್ರಾಮ ಸಭೆಯ ಠರಾವುಗಳು, ರೂಪಿಸಲಾದ ಕ್ರಿಯಾ ಯೋಜನೆ, ಗ್ರಾಮ ಪಂಚಾಯತಿಯಿಂದ ಅನುಷ್ಠಾನ ಮತ್ತು ಅನುಸರಣೆಗೆ ಸಂಬಂದಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಲವಾರು ಭಾಗೀದಾರರ ಜೊತೆ ಸಮನ್ವಯತೆಯಿಂದ ಕಾರ್ಯನಿರ್ವಹಿಸುವುದು ಹಾಗೂ ಮಕ್ಕಳಿಗೆ ಸಂಬಂಧಿಸಿದ ಗ್ರಾಮ ಪಂಚಾಯತಿ ಮಟ್ಟದಲ್ಲಿನ ಎಲ್ಲಾ ಸಮಿತಿಗಳ ಗಮನಕ್ಕೆ ತರುವುದು ಮತ್ತು ಸದರಿ ಸಮಿತಿಗಳಿಂದ ಮಕ್ಕಳ ಗ್ರಾಮ ಸಭೆಯ ನಿರ್ಣಯಗಳು ಮತ್ತು ಕ್ರಿಯಾ ಯೋಜನೆಯು ಮಕ್ಕಳ ಗ್ರಾಮ ಸಭೆ ನಡೆದ 03 ತಿಂಗಳ ಒಳಗೆ ಗ್ರಾಮ ಪಂಚಾಯತಿಯಿಂದ ಅನುಷ್ಠಾನವಾಗುವಂತೆ ಹಾಗೂ ಪ್ರಗತಿ ವರದಿ ಸಲ್ಲಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

4. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ:

ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ತಾಲ್ಲೂಕಿನಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಈ ಮೇಲೆ ವಿವರಿಸಿರುವಂತೆ **14 ನವೆಂಬರ್ 2026ರಿಂದ 24 ಜನವರಿ 2027 ರವರೆಗೆ 10 ವಾರಗಳ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆ** ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು

ಪರಿಣಾಮಕಾರಿಯಾಗಿ ನಡೆಸಲು ಹಾಗೂ ಮಕ್ಕಳ ಸುರಕ್ಷತೆಯೊಂದಿಗೆ ಮಕ್ಕಳಿಗೆ ಸಂಬಂಧಿಸಿದ ಸುಸ್ಥಿರ ಗುರಿಗಳ ಎಲ್ಲಾ ಅಂಶಗಳ ಪರಿಣಾಮಕಾರಿ ಅನುಷ್ಠಾನದೊಂದಿಗೆ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಪಂಚಾಯತಿಗಳಾಗಿಸಲು ಸೂಕ್ತ ಮಾರ್ಗದರ್ಶನಕ್ಕಾಗಿ ಮತ್ತು ಸಮನ್ವಯತೆಗಾಗಿ ಈ ಕೆಳಕಂಡ ಜವಾಬ್ದಾರಿ ನಿರ್ವಹಿಸುವುದು.

- ಪಂಚಾಯತಿ ಅಧ್ಯಕ್ಷರು/ ಆಡಳಿತ ಅಧಿಕಾರಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸುವುದು.
- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಮನ್ವಯತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಲು ಅನುಕೂಲವಾಗುವಂತೆ ಮಕ್ಕಳ ಗ್ರಾಮ ಸಭೆಯ ದಿನಾಂಕವನ್ನು ನಿಗದಿಗೊಳಿಸುವುದು ಹಾಗೂ ಸೂಕ್ತ ಮಾರ್ಗ ದರ್ಶನ ಮತ್ತು ಸಲಹೆ ನೀಡುವುದು.
- ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಲು ಹಾಗೂ ಮಕ್ಕಳ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಬಗೆಹರಿಸಲು ಸೂಕ್ತ ನಿರ್ದೇಶನ ನೀಡುವುದು.
- ಹಣಕಾಸಿನ ನೆರವು ಇಲ್ಲದೆ ತೊಡಗಿಸಿಕೊಳ್ಳಲು ಆಸಕ್ತಿ ಇರುವ ಸ್ವಯಂ ಸೇವಾ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಕ್ರಮವಹಿಸುವುದು.
- ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಮಕ್ಕಳ ಗ್ರಾಮ ಸಭೆಯ ಸಭಾ ನಡಾವಳಿ, ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿಗಳಿಂದ ಪಂಚತಂತ್ರ-2.0 ತಂತ್ರಾಂಶದಲ್ಲಿ ಅಳವಡಿಸಲು ಸೂಕ್ತ ಕ್ರಮ ಮತ್ತು ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.
- ಗ್ರಾಮ ಪಂಚಾಯತಿ ಮಕ್ಕಳ ಗ್ರಾಮ ಸಭೆಯಲ್ಲಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದು 03 ತಿಂಗಳೊಳಗೆ ಅನುಷ್ಠಾನಗೊಳಿಸಲು ಅನುಸರಣೆ ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಂಡು, ತಾವು ತೆಗೆದುಕೊಂಡ ಕ್ರಮದ ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

4. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ:

- ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಈ ಮೇಲೆ ವಿವರಿಸಿರುವಂತೆ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ'ದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಸಲು ಮಾರ್ಗದರ್ಶನ ನೀಡುವುದು.
- ತಮ್ಮ ಜಿಲ್ಲೆಯಲ್ಲಿ ಆಯೋಜಿಸಿದ ಮಕ್ಕಳ ಗ್ರಾಮ ಸಭೆಗಳು,ಕ್ರಿಯಾ ಯೋಜನೆ ರೂಪಣೆ ಹಾಗೂ ಅನುಷ್ಠಾನದ ಕುರಿತಂತೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

- ಹಣಕಾಸಿನ ನೆರವು ಇಲ್ಲದೆ ಜಿಲ್ಲೆಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಹಾಗೂ ಮಾನವ ಸಂಪನ್ಮೂಲ ಮತ್ತು ಸಾಮರ್ಥ್ಯವಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ತಾಲ್ಲೂಕು/ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸಲು ಹಂಚಿಕೆ ಮಾಡುವುದು.
- "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ, ಮಾಧ್ಯಮಗಳಲ್ಲಿ ಹೆಚ್ಚಿನ ರೀತಿಯ ಪ್ರಚಾರ ಮಾಡಲು ಹಾಗೂ ಮಕ್ಕಳ ಕೋರಿಕೆ ಪತ್ರವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ಮೇಲೆ ವಿವರಿಸಿರುವಂತೆ ರಾಜ್ಯ ಮಟ್ಟದಿಂದ ಗ್ರಾಮ ಪಂಚಾಯತಿ ಮಟ್ಟದ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಸ್ಥಳೀಯ ಸಮುದಾಯ ಮತ್ತು ಅಧಿಕಾರೇತರರನ್ನು ತೊಡಗಿಸಿಕೊಂಡು **14 ನವೆಂಬರ್ 2026ರಿಂದ 24 ಜನವರಿ 2027 ರವರೆಗೆ 10 ವಾರಗಳ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆಯನ್ನು** ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪರಿಣಾಮಕಾರಿಯಾಗಿ ನಡೆಸುವುದು, ನಿರಂತರವಾಗಿ ಗ್ರಾಮ ಪಂಚಾಯತಿಗಳಿಂದ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಸುಸ್ಥಿರ ಗುರಿಗಳ ಸಾಧನೆಗೆ ಕಾರ್ಯನಿರ್ವಹಿಸಿ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಗ್ರಾಮ ಪಂಚಾಯತಿಗಳನ್ನಾಗಿಸಲು ಸೂಚಿಸಿದೆ.

ವಿವಿಧ ಜಿಲ್ಲೆಗಳ ಉಸ್ತುವಾರಿಯನ್ನು ನಿರ್ವಹಿಸುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆಯ ಬೋಧಕರು ತಮ್ಮ ತಮ್ಮ ಉಸ್ತುವಾರಿ ಜಿಲ್ಲೆಗಳ ಭೇಟಿಯ ಸಮಯದಲ್ಲಿ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ಮತ್ತು ಮಕ್ಕಳ ಗ್ರಾಮ ಸಭೆ ಕುರಿತು ಗಮನಹರಿಸಲು ಮತ್ತು ಅಗತ್ಯ ಕ್ರಮ ವಹಿಸಲು ಕೋರಿದೆ.

"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆಯ ಆಯೋಜನೆಗೆ ಸಂಬಂದಿಸಿದಂತೆ ಪೂರ್ಣ ಬೆಂಬಲ ನೀಡಲು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ತಮ್ಮ ಇಲಾಖೆಯ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ರಾಜ್ಯ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಕೋರಿದೆ.

(ಸರ್ಕಾರದ ಕಾರ್ಯದರ್ಶಿ(ಪಂ.ರಾಜ್)
ರವರಿಂದ ಅನುಮೋದಿಸಲ್ಪಟ್ಟಿದೆ)

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ ಆಡಳಿತಾಧಿಕಾರಿಗಳಿಗೆ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಕಛೇರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ ಮತ್ತು ಪೂರ್ಣ ಬೆಂಬಲಕ್ಕಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಕರ್ನಾಟಕ ಸರ್ಕಾರ,ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಗೃಹ ಇಲಾಖೆ ರವರ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ರವರ ಆಪ್ತ ಕಾರ್ಯದರ್ಶಿ
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ.
12. ಸರ್ಕಾರದ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿ.
15. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
16. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
17. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

18. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಆಪ್ತ ಸಹಾಯಕರು.
19. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
20. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
21. ಆಯುಕ್ತರು, ಕಾರ್ಮಿಕ ಇಲಾಖೆ , ಕಾರ್ಮಿಕ ಭವನ, ಬೆಂಗಳೂರು.
22. ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
23. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ.
24. ನಿರ್ದೇಶಕರು, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು
25. ನಿರ್ದೇಶಕರು,ಮಕ್ಕಳ ಸಂರಕ್ಷಣಾ ನಿರ್ದೇಶನಾಲಯ / ಐ.ಸಿ.ಪಿ.ಎಸ್, ಕರ್ನಾಟಕ ಸರ್ಕಾರ
26. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು.
27. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು

ಅನುಬಂಧ-ಎ

ಗ್ರಾಮ ಪಂಚಾಯತಿಗಳಲ್ಲಿ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು "ಮಕ್ಕಳ ಗ್ರಾಮ ಸಭೆ"ಯ ಕಾರ್ಯಚಟುವಟಿಕೆಗಳ ಮಾದರಿ ವೇಳಾ ಪಟ್ಟಿ

ದಿನಾಂಕ 14 ನವೆಂಬರ್ 2026 ರಿಂದ 24 ಜನವರಿ 2027ರ ವರೆಗೆ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ನಡೆಸಲು ಸಂಬಂಧಿಸಿದಂತೆ ಕಾರ್ಯಚಟುವಟಿಕೆಗಳ ವೇಳಾಪಟ್ಟಿ. **(ಇದು ಕೇವಲ ಮಾದರಿ ಮತ್ತು ಮಾರ್ಗದರ್ಶಿಯಾಗಿದ್ದು ಸ್ಥಳೀಯವಾಗಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬಹುದಾಗಿದೆ)**

ಪೂರ್ವ ತಯಾರಿ		
ಕ್ರ. ಸಂ.	**ಕಾರ್ಯವಟುವಟಿಕೆ/ಕಾರ್ಯಕ್ರಮ**	**ತಾತ್ಕಾಲಿಕ ದಿನಾಂಕ/ಅವಧಿ**
1.	ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಮತ್ತು ಜಿಲ್ಲೆಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವುದು.	16 ನವೆಂಬರ್ 2026ರೊಳಗೆ
2.	ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ, ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ/ ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಗಳೊಂದಿಗೆ ಹಾಗೂ ತಾಲ್ಲೂಕಿನ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವುದು.	17 ರಿಂದ 20 ನವೆಂಬರ್ 2026 ರೊಳಗೆ
3.	ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಗೆ ದಿನಾಂಕ ನಿಗದಿಗೊಳಿಸುವುದು.	17 ರಿಂದ 20 ನವೆಂಬರ್ 2026 ರೊಳಗೆ
4	ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಲು ಸೂಕ್ತ ನಿರ್ದೇಶನ ನೀಡಿ ಕ್ರಮವಹಿಸುವುದು.	17 ರಿಂದ 20 ನವೆಂಬರ್ 2026 ರೊಳಗೆ
5	ಕಳೆದ ಸಾಲಿನಲ್ಲಿ ನಡೆಸಲಾದ ಮಕ್ಕಳ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳ ಅನುಪಾಲನಾ ವರದಿಯನ್ನು ಸಿದ್ಧಪಡಿಸುವುದು.	23 ನವೆಂಬರ್ 2026 ರೊಳಗೆ
6	ಪ್ರತಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಪರಿಸ್ಥಿತಿಯನ್ನು ಅನುಬಂಧ-ಸಿ ಯಲ್ಲಿ ಸಂಗ್ರಹಿಸಿಡುವುದು ಮತ್ತು ಇಲಾಖೆಯ ಪಂಚತಂತ್ರ-2.0 ತಂತ್ರಾಂಶದಲ್ಲಿ ಅಳವಡಿಸುವುದು.	24 ನವೆಂಬರ್ 2026 ರೊಳಗೆ

7	**ಪೂರ್ವ ತಯಾರಿ ಸಭೆ:** ಗ್ರಾಮ ಪಂಚಾಯತಿಯಿಂದ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಒಂದು ದಿನ ಮಕ್ಕಳ ಗ್ರಾಮ ಸಭೆಯನ್ನು ನಡೆಸಲು ಸಂಬಂಧಿಸಿದಂತೆ ಪೂರ್ವ ತಯಾರಿ ಸಭೆಯನ್ನು ನಡೆಸುವುದು. ಇಲಾಖೆ ಮತ್ತು ಇಲಾಖೇತರ ಎಲ್ಲ ಭಾಗೀದಾರರನ್ನು, ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಮತ್ತು ಮಹಿಳೆಯರಿಗೆ ಸಂಬಂಧಿಸಿ ಸಮಿತಿಗಳ ಸದಸ್ಯರನ್ನು ಆಹ್ವಾನಿಸುವುದು.	24 ರಿಂದ 25 ನವೆಂಬರ್ 2026 ರೊಳಗೆ
8	"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆಯ ಕಾರ್ಯಕ್ರಮಗಳ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು.	24 ರಿಂದ 25 ನವೆಂಬರ್ 2026 ರೊಳಗೆ
9	ಪೂರ್ವ ತಯಾರಿ ಸಭೆಯಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಲ್ಲಿನ ಒಬ್ಬ ಅಧಿಕಾರಿ/ಅಧಿಕಾರೇತರ ವ್ಯಕ್ತಿಯನ್ನು **"ಪಂಚಾಯತಿ ಬಾಲ ಮಿತ್ರ"** ಎಂದು ಗುರುತಿಸಿ ಘೋಷಿಸುವುದು.	24 ರಿಂದ 25 ನವೆಂಬರ್ 2026 ರೊಳಗೆ
10	ಗ್ರಾಮ ಪಂಚಾಯತಿಯಿಂದ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ"ಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಫೇಸ್ ಬುಕ್ ಪೇಜ್ ರಚಿಸುವುದು ಮತ್ತು ಪ್ರಚಾರ ಮಾಡುವುದು. (ಈಗಾಗಲೇ ಸೃಜಿಸಿದ್ದಲ್ಲಿ ಪ್ರಚಾರ ಮಾಡುವುದು)	25 ನವೆಂಬರ್ 2026 ರೊಳಗೆ
11	ಮಕ್ಕಳ ಕೋರಿಕೆ ಪತ್ರ ಮುದ್ರಿಸುವುದು, ಪೋಸ್ಟರ್ ತಯಾರಿಸುವುದು, ಮಕ್ಕಳ ದನಿ ಪೆಟ್ಟಿಗೆ ಸಿದ್ಧಪಡಿಸುವುದು.	25 ನವೆಂಬರ್ 2026 ರೊಳಗೆ
12	ಗುರುತಿಸಲಾದ ಪಂಚಾಯಿತಿ ಬಾಲಮಿತ್ರರ ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.	25 ನವೆಂಬರ್ 2025 ರೊಳಗೆ
13	ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಬಾಲಮಿತ್ರರಿಗೆ ಅವರ ಜವಾಬ್ದಾರಿ ಹಾಗೂ ಪಾತ್ರದ ಕುರಿತಂತೆ ಮಾಹಿತಿ ನೀಡುವುದು.	30 ನವೆಂಬರ್ 2026 ರೊಳಗೆ
14	ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಕಛೇರಿ, ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಿ ದನಿ ಪೆಟ್ಟಿಗೆಯನ್ನು ಮತ್ತು ಕೋರಿಕೆ ಪತ್ರಗಳನ್ನು ಇರಿಸುವುದು.	30 ನವೆಂಬರ್ 2026 ರೊಳಗೆ
ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಮತ್ತು ಮಕ್ಕಳ ಗ್ರಾಮ ಸಭೆ ಆಯೋಜನೆ ದಿನಾಂಕ 14-11-2026 ರಿಂದ 24-01-2027		
15	ಮಕ್ಕಳಿಗೆ ಶಿಬಿರಗಳನ್ನು ಆಯೋಜಿಸಿ,ಮಕ್ಕಳಿಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸುವುದು.	ಅಭಿಯಾನದ ಅವಧಿಯಲ್ಲಿ
16	ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಪೂರಕ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸುವುದು.	ಅಭಿಯಾನದ ಅವಧಿಯಲ್ಲಿ
17	ಶಿಕ್ಷಣ ಕಾರ್ಯಪಡೆಯಿಂದ ಮಕ್ಕಳನ್ನು ಗ್ರಾಮ ಪಂಚಾಯತಿ ಅರಿವಿನ ಕೇಂದ್ರಕ್ಕೆ ನೋಂದಾವಣಿ ಮಾಡುವುದು ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ 18 ವರ್ಷದೊಳಗಿನ ಎಲ್ಲಾ ಮಕ್ಕಳ ನೋಂದಣಿಯನ್ನು ಖಾತರಿಪಡಿಸಿಕೊಳ್ಳುವುದು.	ಅಭಿಯಾನದ ಅವಧಿಯಲ್ಲಿ

	ನೋಂದಾಯಿತ ಮಕ್ಕಳ ಅರಿವು ಕೇಂದ್ರದ ಬಳಕೆ ಮಾಡಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.	
18	ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಗ್ರಾಮ ಪಂಚಾಯತಿ ಅರಿವಿನ ಕೇಂದ್ರಗಳಲ್ಲಿ ವಿಜ್ಞಾನ ಹಾಗೂ ಪವಾಡ ಬಯಲು ಕಾರ್ಯಕ್ರಮಗಳನ್ನು ಆಯೋಜಿಸುವುದು.	ಅಭಿಯಾನದ ಅವಧಿಯಲ್ಲಿ
19	ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ, ಬಾಲ ಕಾರ್ಮಿಕತೆ, ಜೀತ ಪದ್ಧತಿ, ಸಾಮಾಜಿಕ ಪಿಡುಗುಗಳ ಬಗ್ಗೆ, ಶಿಕ್ಷಣದ ಮಹತ್ವ ಕುರಿತು ಜಾಗೃತಿ ಮೂಡಿಸುವುದು.	ಅಭಿಯಾನದ ಅವಧಿಯಲ್ಲಿ
20	ಶಾಲಾ ಕಾಲೇಜುಗಳಲ್ಲಿ ಮಕ್ಕಳ ಹಕ್ಕುಗಳ ಕುರಿತು ಭಾಷಣ, ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸುವುದು.	ಅಭಿಯಾನದ ಅವಧಿಯಲ್ಲಿ
21	ವಾರ್ಡ್/ಗ್ರಾಮ ಮಟ್ಟದ ಮಕ್ಕಳ ಗ್ರಾಮ ಸಭೆಯನ್ನು ನಡೆಸುವುದು (ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ)	ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯ 06 ದಿನಗಳ ಮುಂಚಿತವಾಗಿ
22	ಪೇಸ್ ಬುಕ್ ಪೇಜಿನಿಂದ, ಮಕ್ಕಳ ದನಿ ಪೆಟ್ಟಿಗೆಯಿಂದ, ವಾರ್ಡ್/ ಗ್ರಾಮ ಮಟ್ಟದ ಸಭೆಗಳಿಂದ, ಸ್ವೀಕರಿಸಲಾದ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಕ್ರೋಡೀಕರಿಸಿ ಪಟ್ಟಿಯನ್ನು ಸಿದ್ಧಪಡಿಸುವುದು.	ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯ 03 ದಿನಗಳ ಮುಂಚಿತವಾಗಿ
23	ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಯನ್ನು ನಡೆಸುವುದು.	ನಿಗದಿ ಪಡಿಸಲಾದ ದಿನದಂದು
24	ಮಕ್ಕಳ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.	15 ಡಿಸೆಂಬರ್ 2026 ರೊಳಗೆ
25	ಮಕ್ಕಳ ಗ್ರಾಮ ಸಭೆಯಲ್ಲಿ ಪರಿಹರಿಸಲಾದ ಮಕ್ಕಳ ಸಮಸ್ಯೆಗಳು/ ಬೇಡಿಕೆಗಳು/ಪ್ರಶ್ನೆಗಳ ವರದಿಯನ್ನು ಸಿದ್ಧಪಡಿಸುವುದು.	15 ಡಿಸೆಂಬರ್ 2026 ರೊಳಗೆ
26	ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.	ಮಕ್ಕಳ ಗ್ರಾಮ ಸಭೆಯ ನಂತರ ಗ್ರಾಮ ಪಂಚಾಯತಿಯಲ್ಲಿ ನಡೆಸಲಾದ ಮೊದಲ ಸಭೆಯಲ್ಲಿ
27	ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮ ಪಂಚಾಯತಿಯಿಂದ ಅಳವಡಿಸುವುದು.	ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾದ ಮೂರು ದಿನಗಳೊಳಗಾಗಿ
28	ಜಿಲ್ಲಾ ಪಂಚಾಯತಿಯಿಂದ ತಮ್ಮ ಜಿಲ್ಲೆಯಲ್ಲಿನ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆಯ ಕ್ರೋಡೀಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.	31 ಜನವರಿ 2027 ರೊಳಗೆ

29	ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ತಯಾರಿಸಲಾದ ಕ್ರಿಯಾ ಯೋಜನೆಯ ಅನುಷ್ಠಾನದ ಪ್ರಗತಿ ವರದಿಯನ್ನು ಗ್ರಾಮ ಪಂಚಾಯಿತಿಯಿಂದ ಪಂಚತಂತ್ರ 2.0 ತಂತ್ರಾಂಶದಲ್ಲಿ ಇಂದೀಕರಿಸುವುದು.	ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕ್ರಿಯಾಯೋಜನೆ ಅನುಮೋದನೆಯಾದ ನಂತರ ಪ್ರತೀ ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ ಮಾಡುವುದು.

ಅನುಬಂಧ-ಬಿ

"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ' ದ ಅಂಗವಾಗಿ ಪೂರ್ವಭಾವಿ ಸಭೆಯಲ್ಲಿ ಈ ಸುತ್ತೋಲೆಯನ್ನು ಓದಿ ತಿಳಿಸುವುದು. ನಂತರ ಚರ್ಚಿಸಿ ಈ ಕೆಳಕಂಡ ಗುರಿಗಳ ಸಾಧನೆಗೆ ಕಾರ್ಯಕ್ರಮ/ ಚಟುವಟಿಕೆಗಳನ್ನು ರೂಪಿಸುವುದು ಹಾಗೂ ತಾತ್ಕಾಲಿಕ ಕಾರ್ಯಕ್ರಮಗಳ/ ಚಟುವಟಿಕೆಗಳ ವೇಳಾ ಪಟ್ಟಿಯನ್ನು ತಯಾರಿಸುವುದು.

ಒತ್ತು ಕೊಡಬೇಕಾದ ಹಾಗೂ ಸಾಧಿಸಬೇಕಾದ ಗುರಿಗಳು

1. ಶೇಕಡ 100 ರಷ್ಟು ಮಕ್ಕಳ ಜನನ ನೊಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ.
2. ಶೇಕಡ 100 ರಷ್ಟು ಮಕ್ಕಳಿಗೆ ಚುಚ್ಚು ಮದ್ದು.
3. ಗ್ರಾಮ ಪಂಚಾಯತಿಗಳಲ್ಲಿ ಕೂಸಿನ ಮನೆ ಸೌಲಭ್ಯವಿದ್ದಲ್ಲಿ ಜಾಬ್ ಕಾರ್ಡ್ ಹೊಂದಿರುವ ಕುಟುಂಬಗಳ 03ವರ್ಷದೊಳಗಿನ ಮಕ್ಕಳ ದಾಖಲಾತಿ ಹಾಗೂ ಪೋಷಣೆ.
4. ಶೇಕಡ 100 ರಷ್ಟು 3 ರಿಂದ 6 ವರ್ಷದ ಮಕ್ಕಳು ಅಂಗನವಾಡಿ/ಪೂರ್ವ ಪ್ರಾಥಮಿಕ ಕೇಂದ್ರಗಳಿಗೆ ದಾಖಲಾತಿ ಹಾಗೂ ಹಾಜರಾತಿ.
5. ಶೇಕಡ 100 ರಷ್ಟು ಮಕ್ಕಳಿಗೆ ಪೌಷ್ಟಿಕ ಆಹಾರ/ಅಂಗನವಾಡಿ ಸೇವೆಗಳ ಪೂರೈಕೆ.
6. ಗ್ರಾಮ ಪಂಚಾಯತಿಯಲ್ಲಿನ ತೀವ್ರ ಅಪೌಷ್ಟಿಕ ಮತ್ತು ಮಧ್ಯಮ ತೀವ್ರ ಅಪೌಷ್ಟಿಕ ಮಕ್ಕಳನ್ನು ಪತ್ತೆ ಹಚ್ಚುವುದು ಹಾಗೂ ಅಂಥಹ ಮಕ್ಕಳಿಗೆ ಪೌಷ್ಟಿಕ ಅಂಶವನ್ನು ಒದಗಿಸಲು/ಪೂರೈಸಲು ಕ್ರಮ ಕೈಗೊಳ್ಳುವುದು.
7. ಶೇಕಡ 100ರಷ್ಟು 6 ರಿಂದ 14 ವರ್ಷದ ಮಕ್ಕಳು ಶಾಲೆಗೆ ದಾಖಲಾತಿ ಹಾಗೂ ಹಾಜರಾತಿ.
8. ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆಯಿಂದ ಮುಕ್ತತೆ (ಬಾಲ ಕಾರ್ಮಿಕತೆ ಯಿಂದ ಮುಕ್ತತೆ).
9. ಶೂನ್ಯ ಬಾಲ್ಯ ವಿವಾಹ ಪ್ರಕರಣ.
10. 18 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳಿಗೆ ಶಿಕ್ಷಣ.
11. ಮಕ್ಕಳ ಜೀತ ಪದ್ಧತಿ ಮುಕ್ತತೆ.
12. ಮಕ್ಕಳ ಸಾಗಾಟ ಮುಕ್ತತೆ.
13. ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಮೇಲೆ ಆಗುವ ದೌರ್ಜನ್ಯ ತಡೆಯುವುದು.
14. ಶಿಶು ಮರಣ ಪ್ರಮಾಣ ತಗ್ಗಿಸುವುದು.
15. ಮೂಢ ನಂಬಿಕೆಗಳಿಗೆ ಮಕ್ಕಳ ಬಲಿ ಆಗುವುದನ್ನು ಸಂಪೂರ್ಣ ನಿಷೇಧ.
16. ಮಕ್ಕಳ ಭಿಕ್ಷಾಟನೆ ನಿಷೇಧ.
17. ಬೀದಿ ಮಕ್ಕಳು ಇದ್ದಲ್ಲಿ, ಬೀದಿ ಮಕ್ಕಳಿಗೆ ಪುನರ್ವಸತಿ ವ್ಯವಸ್ಥೆ/ಅಗತ್ಯ ಸೌಲಭ್ಯ ಕಲ್ಪಿಸುವುದು.
18. ಹೆಚ್.ಐ.ವಿ. ಸೋಂಕಿತ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಅಗತ್ಯ ಬೆಂಬಲ.
19. ಕ್ಷಯ ರೋಗ ಪೀಡಿತ ಪೋಷಕರ ಕುಟುಂಬಗಳ ಮಕ್ಕಳಿಗೆ ಅಗತ್ಯ ಬೆಂಬಲ.
20. ಬರಪೀಡಿತ/ಪ್ರವಾಹ/ಹವಾಮಾನ ವಿಕೋಪಕ್ಕೆ ಒಳಗಾದ ಗ್ರಾಮಗಳಲ್ಲಿ ದುರ್ಬಲವರ್ಗಗಳ ಕುಟುಂಬಗಳ ಮಕ್ಕಳಿಗೆ ಅಗತ್ಯ ಬೆಂಬಲ.
21. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯ ಬೆಂಬಲ.

22. ಬಡ ಹಾಗೂ ದುರ್ಬಲ ವರ್ಗದ ಮಕ್ಕಳ ಉನ್ನತ ಶಿಕ್ಷಣಕ್ಕೆ ಬೆಂಬಲ.
23. ಅಂಗನವಾಡಿ, ಶಾಲೆ, ಆರೋಗ್ಯ ಕೇಂದ್ರ, ವಸತಿ ನಿಲಯ, ಆಶ್ರಮ ಶಾಲೆ, ಗ್ರಾಮ ಪಂಚಾಯತಿ ಅರಿವು ಕೇಂದ್ರ ಹೀಗೆ ಮಕ್ಕಳಿಗೆ ಸೇವೆ ಒದಗಿಸುವ ಸಾರ್ವಜನಿಕ ಸಂಸ್ಥೆಗಳಿಗೆ ಅಗತ್ಯ ಮೂಲ ಸೌಕರ್ಯದ ಬೆಂಬಲ.
24. ತೆರೆದ ಗುಂಡಿಗಳನ್ನು, ಬೋರ್‌ವೆಲ್‌ಗಳನ್ನು ಸರಿಯಾದ ಕ್ರಮದಲ್ಲಿ ಮುಚ್ಚಿರುವುದು. ತನ್ಮೂಲಕ ಮಕ್ಕಳಿಗೆ ಆಗುವ ಅಪಾಯಗಳನ್ನು ತಡೆಯುವುದು.
25. ಸರಕು ಸಾಗಣೆ ವಾಹನಗಳಲ್ಲಿ ಮಕ್ಕಳ ಪ್ರಯಾಣ ನಿಷೇಧ.
26. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಧಾರ್ಮಿಕ ಸ್ಥಳ, ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ನಿಷೇಧ ಕುರಿತು ನಾಮ ಫಲಕ ಅಳವಡಿಕೆ.
27. ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ವ್ಯವಸ್ಥೆ.
28. ವಲಸೆ ಕಾರ್ಮಿಕರ ಮಾಹಿತಿ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ.

ಅನುಬಂಧ- ಸಿ



ಮಕ್ಕಳ ಸ್ಥಿತಿ
ಮಕ್ಕಳ ಸ್ನೇಹಿ ಗ್ರಾಮಪಂಚಾಯಿತಿಗಳು
ಮಕ್ಕಳ ಗ್ರಾಮಸಭೆಗೆ ವಿವಿಧ ಇಲಾಖೆಗಳಿಂದ ನೀಡಬೇಕಾದ ಮಾಹಿತಿ

(2025-26ನೇ ಸಾಲಿನಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆ, ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷಾರತಾ ಇಲಾಖೆ ರವರು ಕೈಗೊಳ್ಳುವ ಮಕ್ಕಳ ಸ್ಥಿತಿಗತಿಗಳ ವಾರ್ಷಿಕ ಸಮೀಕ್ಷೆಯಲ್ಲಿ ಸಂಗ್ರಹಿಸಲಾದ ಈ ಕೆಳಗಿನ ವಿಷಯಗಳ ಕುರಿತು ಅಂಕಿ ಅಂಶಗಳ ವರದಿಯನ್ನು ವಾರ್ಡ್ ಮತ್ತು ಗ್ರಾಮ ಮಟ್ಟದಲ್ಲಿ ಸಿದ್ಧಪಡಿಸಿ, ನಂತರ ಪಂಚಾಯಿತಿ ಮಟ್ಟದ ಮಾಹಿತಿಗಳನ್ನು ಕ್ರೋಢೀಕರಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳು ಸಹ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಗೆ ನೀಡಿರುವ ಅಂಶಗಳಿಗೆ ಮಾಹಿತಿಯನ್ನು ನೀಡುವುದು. ಇದನ್ನು ಆಧರಿಸಿ ಚರ್ಚೆಯನ್ನು ಎಲ್ಲ ಇಲಾಖೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಸಿ ಮಕ್ಕಳಿಗೆ ಸಂಬಂಧಿಸಿದ ಯೋಜನೆಗಳನ್ನು ಮಾಡಬೇಕು)

ಗ್ರಾಮ ಪಂಚಾಯಿತಿ ಹೆಸರು:.....

ತಾಲೂಕು:.....ಜಿಲ್ಲೆ:.....

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕುಟುಂಬಗಳು

ಕ್ರ. ಸಂ.	ಕುಟುಂಬಗಳು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪಸಂಖ್ಯಾತರು
1.1	ಒಟ್ಟು ಕುಟುಂಬಗಳು				
1.2	ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಕುಟುಂಬಗಳು				
1.3	ಅರೆಕಾಲಿಕ ವಲಸೆ ಕುಟುಂಬಗಳು				
1.4	ಕಳೆದ ಸಾಲಿನಲ್ಲಿ ನರೇಗಾ ಯೋಜನೆಯಡಿ 100 ದಿನ ಕೆಲಸ ಪಡೆದ ಕುಟುಂಬಗಳು				
1.5	ಸ್ವಂತ ಶೌಚಾಲಯವನ್ನು ಹೊಂದಿರುವ ಕುಟುಂಬಗಳು				
1.6	ಸ್ವಂತ ಶೌಚಾಲಯವನ್ನು ಬಳಸುತ್ತಿರುವ ಕುಟುಂಬಗಳು				
1.7	ಸಮುದಾಯ ಶೌಚಾಲಯವನ್ನು ಬಳಸುತ್ತಿರುವ ಕುಟುಂಬಗಳು				
1.8	ಮನೆಯೊಳಗೆ ಶುದ್ಧ ನೀರಿನ ಲಭ್ಯತೆ ಹೊಂದಿರುವ ಕುಟುಂಬಗಳು				
1.9	ಸಮುದಾಯ ನೀರಿನ ಲಭ್ಯತೆ ಹೊಂದಿರುವ ಕುಟುಂಬಗಳ ಸಂಖ್ಯೆ				

ಜನಸಂಖ್ಯೆ

ಕ್ರ. ಸಂ.	ಜನಸಂಖ್ಯೆ	ಗಂಡು	ಹೆಣ್ಣು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪ ಸಂಖ್ಯಾತ
1.10	ಒಟ್ಟು ಜನಸಂಖ್ಯೆ						
1.11	ಒಟ್ಟು ಮತದಾರರ ಸಂಖ್ಯೆ						

2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕ್ರ. ಸಂ.	ಮಕ್ಕಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪಸಂಖ್ಯಾತರು	ವಿಕಲ ಚೇತನರು
2.1	0-3 ವರ್ಷದ ಒಟ್ಟು ಮಕ್ಕಳ ಸಂಖ್ಯೆ							
2.2	0-3 ವರ್ಷದ ಅಂಗನವಾಡಿಗೆ ದಾಖಲಾದ ಮಕ್ಕಳ ಸಂಖ್ಯೆ							
2.3	3-6 ವರ್ಷದ ಒಟ್ಟು ಮಕ್ಕಳ ಸಂಖ್ಯೆ							
2.4	3-6 ವರ್ಷದ ಅಂಗನವಾಡಿಗೆ ದಾಖಲಾದ ಮಕ್ಕಳ ಸಂಖ್ಯೆ							
2.5	ಸರಾಸರಿ ಹಾಜರಾಗುವ ಮಕ್ಕಳ ಸಂಖ್ಯೆ							

2.6	ಖಾಸಗಿ ಅಂಗನವಾಡಿಗೆ ದಾಖಲಾದ ಮಕ್ಕಳ ಸಂಖ್ಯೆ							
2.7	ಅಪೌಷ್ಟಿಕತೆ ಹೊಂದಿರುವ 5 ವರ್ಷದೊಳಗಿನ ಮಕ್ಕಳ ಸಂಖ್ಯೆ							
2.8	ಹದಿಹರೆಯದ ಅಪೌಷ್ಟಿಕತೆಗೊಳಗಾಗಿರುವ ಮಕ್ಕಳು							
2.9	18 ವರ್ಷದೊಳಗೆ ಮದುವೆಯಾದ ಮಕ್ಕಳ ಸಂಖ್ಯೆ							
2.10	ದತ್ತು ಪಡೆದ ಮತ್ತು ದತ್ತು ಹೋದ ಮಕ್ಕಳ ಕುಟುಂಬಗಳು							
2.11	ಪೋಷಕತ್ವ ಅಥವಾ ಇತರೆ ಆರ್ಥಿಕ ನೆರವು ಅಗತ್ಯವಿರುವ ಮಕ್ಕಳ ಸಂಖ್ಯೆ							
2.12	ಮಾದಕ ವಸ್ತುಗಳ ಬಳಕೆಯಲ್ಲಿ ಬಿದ್ದಿರುವ ಮಕ್ಕಳು							

3. ಶಿಕ್ಷಣ ಇಲಾಖೆ

ಕ್ರ. ಸಂ.	ಮಕ್ಕಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪಸಂಖ್ಯಾತರು	ವಿಕಲಚೇತನರು
3.1	6-14 ವರ್ಷದ ಒಟ್ಟು ಮಕ್ಕಳ ಸಂಖ್ಯೆ							
3.2	6-14 ವರ್ಷದ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ							
3.3	ಸರಾಸರಿ ಹಾಜರಾಗುವ ಮಕ್ಕಳ ಸಂಖ್ಯೆ							
3.4	14-18 ವರ್ಷದ ಒಟ್ಟು ಮಕ್ಕಳ ಸಂಖ್ಯೆ							
3.5	ಸರ್ಕಾರೇತರ / ಖಾಸಗಿ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ							
3.6	ರ್ಕಾರಿ ಶಾಲೆಗೆ ದಾಖಲಾದ 14-18 ವರ್ಷದÀ ಮಕ್ಕಳ ಸಂಖ್ಯೆ							
3.7	ಸರಾಸರಿ ಹಾಜರಾಗುವ ಮಕ್ಕಳ ಸಂಖ್ಯೆ							
3.8	ಶಾಲೆಯಿAದ ಹೊರಗುಳಿದ ಮಕ್ಕಳ ಸಂಖ್ಯೆ							
3.9	ಆರ್.ಟಿ.ಇ 25% ಅಡಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ							
3.10	ವಿವಿಧ ವಿದ್ಯಾರ್ಥಿವೇತನಗಳನ್ನು ಪಡೆಯುತ್ತಿರುವ ಮಕ್ಕಳ ಸಂಖ್ಯೆ							

4. ಆರೋಗ್ಯ ಇಲಾಖೆ

ಕ್ರ. ಸಂ.	ವಿವರಣೆ / ಮಕ್ಕಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪಸಂಖ್ಯಾತ
4.1	ಈ ವರ್ಷ ಪಂಚಾಯಿತಿ ವ್ಯಾಪ್ತಿಯಲ್ಲಾದ ಹೆರಿಗೆಗಳು	**NA**					
4.2	ಈ ಪೈಕಿ ಸಾಂಸ್ಥಿಕ ಹೆರಿಗೆಗಳು	**NA**					
4.3	ಹೆರಿಗೆ ಸಮಯದಲ್ಲಿ ನಿಧನರಾದ ತಾಯಂದಿರು	**NA**					
4.4	18 ವರ್ಷದೊಳಗಿನವರಿಗಾದ ಹೆರಿಗೆಗಳು	**NA**					
4.5	18 ವರ್ಷದೊಳಗಿನ ಹೆರಿಗೆ ಸಮಯದಲ್ಲಿ ನಿಧನರಾದ ತಾಯಂದಿರು	**NA**					
4.6	ನೋಂದಾಯಿತ ಗರ್ಭಿಣಿಯರು	**NA**					
4.7	ನೋಂದಾಯಿತ 18 ವರ್ಷದೊಳಗಿನ ಗರ್ಭಿಣಿಯರು	**NA**					
4.8	ಹುಟ್ಟಿದ 1 ವಾರದೊಳಗೆ ಮರಣ ಹೊಂದಿದ ಮಕ್ಕಳು						
4.9	ಹುಟ್ಟಿದ 1 ತಿಂಗಳೊಳಗೆ ಮರಣ ಹೊಂದಿದ ಮಕ್ಕಳು						

4.10	ಹುಟ್ಟಿದ 1 ವರ್ಷದೊಳಗೆ ಮರಣ ಹೊಂದಿದ ಮಕ್ಕಳು						
4.11	ಹುಟ್ಟಿದ 5 ವರ್ಷದೊಳಗೆ ಮರಣ ಹೊಂದಿದ ಮಕ್ಕಳು						
4.12	ಪಂಚಾಯಿತಿ ವ್ಯಾಪ್ತಿಯಲ್ಲಾದ ಒಟ್ಟು ಗರ್ಭಪಾತಗಳು	**NA**					
4.13	18 ವರ್ಷದೊಳಗಿನವರಿಗಾದ ಗರ್ಭಪಾತಗಳು	**NA**					
4.14	ಎಲ್ಲಾ ರೀತಿಯ ರೋಗ ನಿರೋಧಕಗಳನ್ನು ಪಡೆದ 5 ವರ್ಷದೊಳಗಿನ ಮಕ್ಕಳ ಸಂಖ್ಯೆ						
4.15	ದೀರ್ಘಕಾಲಿಕ ಅಥವಾ ಗಂಭೀರ ಕಾಯಿಲೆಗೆ ತುತ್ತಾದ ಮಕ್ಕಳು						
4.16	ಇಂಥಹ ಎಷ್ಟು ಮಕ್ಕಳಿಗೆ ಹೆಚ್ಚಿನ ವೈದ್ಯಕೀಯ ಸವಲತ್ತು ನೀಡಲಾಗುತ್ತಿದೆ.						

5. ಪೊಲೀಸ್ ಇಲಾಖೆ

ಕ್ರ. ಸಂ.	ಮಕ್ಕಳ ಸಂಖ್ಯೆ	ಗಂಡು	ಹೆಣ್ಣು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪಸಂಖ್ಯಾತ	ವಿಕಲಚೇತನರು
5.1	ಮಕ್ಕಳ ದುಡಿಮೆ ಕುರಿತು ದಾಖಲಾದ ದೂರುಗಳ ಸಂಖ್ಯೆ							

5.2	ಬಾಲ್ಯವಿವಾಹ ಕುರಿತು ದಾಖಲಾದ ದೂರುಗಳ/ ಎಫ್.ಐ.ಆರ್ ಸಂಖ್ಯೆ							
5.3	ಕಾಣೆಯಾದ ಮಕ್ಕಳ ಕುರಿತು ದಾಖಲಾದ ದೂರುಗಳ/ ಎಫ್.ಐ.ಆರ್ ಸಂಖ್ಯೆ							
5.4	ಕಾಣೆಯಾದ ಮಕ್ಕಳಲ್ಲಿ ಎಷ್ಟು ಪ್ರಕರಣಗಳು ಕಿಡ್ನಾಪ್/ಅಪಹರಣ/ ಸಾಗಣೆಗೆ ಗುರಿಯಾದವರೆಂದು ಎಫ್.ಐ.ಆರ್. ದಾಖಲು							
5.5	ಮಕ್ಕಳ ಮೇಲೆ ನಡೆದಿರುವ ಅಪರಾಧಗಳ ಕುರಿತು ದಾಖಲಾದ ದೂರುಗಳ/ ಎಫ್.ಐ.ಆರ್ ಸಂಖ್ಯೆ							
5.6	ಪೋಕ್ಸೋ ಕಾಯಿದೆ (ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣೆ ಕಾಯಿದೆ 2012) ಅಡಿಯಲ್ಲಿ ದಾಖಲಾಗಿರುವ ದೂರುಗಳ / ಎಫ್.ಐ.ಆರ್ ಸಂಖ್ಯೆ							

"ಮಕ್ಕಳ ಗ್ರಾಮ ಸಭೆ"

ನಮೂನೆ-1 (ಮಕ್ಕಳ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಪಟ್ಟಿ)

ಪ್ರಾಥಮಿಕ/ಅಂತಿಮ ಪಟ್ಟಿ/ಸಭಾ ನಡಾವಳಿ

ಜಿಲ್ಲೆ : ತಾಲ್ಲೂಕು: ಗ್ರಾಮ ಪಂಚಾಯತಿ:

ಸಂಗ್ರಹಿಸಲಾದ ಮೂಲ: ಫೇಸ್ ಬುಕ್ ಪೇಜಿನಿಂದ/ದನಿ ಪೆಟ್ಟಿಗೆಯಿಂದ/ ವಾರ್ಡ್/ ಗ್ರಾಮ ಮಟ್ಟದ ಸಭೆಯಿಂದ/ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆ.

ಸಭೆ ನಡೆಸಲಾದ ಸ್ಥಳ: ದಿನಾಂಕ:

ಕ್ರ. ಸಂ.	ವಿಷಯ/ ಸಮಸ್ಯೆ/ ಬೇಡಿಕೆ/ ಪ್ರಶ್ನೆಗಳು	ವಿಷಯ/ ಸಮಸ್ಯೆ/ ಬೇಡಿಕೆ/ ಪ್ರಶ್ನೆಗಳು ಸಂಬಂಧ ಪಡುವ ಕ್ಷೇತ್ರ	ಸಮಸ್ಯೆ/ಬೇಡಿಕೆ/ಪ್ರಶ್ನೆಗಳು ಸಂಬಂಧ ಪಡುವ ಬೌಗೋಳಿಕ ಪ್ರದೇಶ/ಸ್ಥಳ	ಚರ್ಚಿಸಲಾದ ಅಂಶಗಳು- ಸಂಕ್ಷಿಪ್ತವಾಗಿ	ತೆಗೆದುಕೊಳ್ಳಲಾದ ನಿರ್ಣಯ/ ಠರಾವು	ನಿರ್ಣಯ/ ಠರಾವನ್ನು ಜಾರಿಗೊಳಿಸಬೇಕಾದ ಜವಾಬ್ದಾರಿ (ಇಲಾಖೆ ಮತ್ತು ಅಧಿಕಾರಿ)	ಜಾರಿಗೊಳಿಸಲು ನಿಗದಿಪಡಿಸಲಾದ ಕಾಲಾವಧಿ	ಪ ರಾ
1	2	3	4	5	6	7	8	9

ಹಾಜರಾತಿ ಪಟ್ಟಿ

ಕ್ರ. ಸಂ.	ಹೆಸರು (ಮಕ್ಕಳು, ಅಧಿಕಾರಿಗಳು, ಅಧಿಕಾರೇತರರು)	ಲಿಂಗ	ವಯಸ್ಸು	ಓದುತ್ತಿರುವ ತರಗತಿ/ಶಿಕ್ಷಣ ಮಟ್ಟ/ (ಮಕ್ಕಳಾಗಿದ್ದಲ್ಲಿ)	ಹುದ್ದೆ/ ಇಲಾಖೆ/ ಸಂಸ್ಥೆಯ ಹೆಸರು (ಇಲಾಖೆ ಮತ್ತು ಇಲಾಖೇತರರ)	ದೂರವಾಣಿ /ಮೋಬೈಲ್ ಸಂಖ್ಯೆ	ಸಹಿ
1	2	3	4	5	6	7	8

ಸೂಚನೆ:

1. ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರದ ಕಾಲಂನಲ್ಲಿ -ಶಿಕ್ಷಣ, ಆರೋಗ್ಯ, ರಕ್ಷಣೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ವಸತಿ, ಮಾನವ ಸಂಪನ್ಮೂಲ, ಇತ್ಯಾದಿ ನಮೂದಿಸುವುದು.
2. ಮಕ್ಕಳ ಗ್ರಾಮ ಪಂಚಾಯತಿ ಸಭೆಯ ನಡಾವಳಿಗಾಗಿಯೇ ಪ್ರತ್ಯೇಕ ಪುಸ್ತಕ ಇಡುವುದು ಈ ನಮೂನೆಯನ್ನು ಬಳಸುವುದು.
3. ಪ್ರಾಥಮಿಕ ಪಟ್ಟಿ: ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿಯನ್ನು ವಾರ್ಡ್ ಮಟ್ಟದಲ್ಲಿ/ ಗ್ರಾಮ ಮಟ್ಟದಲ್ಲಿ ನಡೆಸಲಾದ ಸಭೆಯ ಮೂಲಕ,ಸಮಸ್ಯೆ/ಬೇಡಿಕೆ/ಪ್ರಶ್ನೆ ಪೆಟ್ಟಿಗೆಯಲ್ಲಿ (ದನಿ ಪೆಟ್ಟಿಗೆ) ಸಂಗ್ರಹಿಸಿದ ಹಾಗೂ ಫೇಸ್ ಬುಕ್ ಪೇಜಿನಲ್ಲಿ ಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆ ಪ್ರತ್ಯೇಕವಾಗಿ ತಯಾರಿಸುವುದು. (ಪ್ರಾಥಮಿಕ ಪಟ್ಟಿ).
4. ಅಂತಿಮ ಕ್ರೋಡೀಕೃತ ಪಟ್ಟಿ: ಒಂದೇ ಸಮಸ್ಯೆ/ಬೇಡಿಕೆ/ಪ್ರಶ್ನೆಯನ್ನು ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೇಳಿರುವ ಹಾಗೂ ಪುನರಾವರ್ತನೆ ಆಗಿರ ಬಹುದು. ಕಾರಣ ವಿವಿಧ ಮೂಲಗಳಿಂದ ಮೂಡಿ ಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿಯನ್ನು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸಿ, ಚರ್ಚಿಸಿ ಕ್ಷೇತ್ರ ಮತ್ತು ಪ್ರಾದೇಶಿಕವಾರು ಕ್ರೋಡೀಕರಿಸಿ ಅಂತಿಮ ಪಟ್ಟಿ ತಯಾರಿಸುವುದು.
5. ಗ್ರಾಮ ಪಂಚಾಯತಿ ಮಕ್ಕಳ ಗ್ರಾಮ ಸಭೆಯಲ್ಲಿ ಚರ್ಚಿಸಿ, ನಿರ್ಣಯ ಮತ್ತು ಜವಾಬ್ದಾರಿ ಹಾಗೂ ಕಾಲಾವಧಿಯನ್ನು ದಾಖಲಿಸುವುದು.
6. ಸಭೆಯಲ್ಲಿ ಹಾಜರಿದ್ದ ಎಲ್ಲಾ ಮಕ್ಕಳು, ಅಧಿಕಾರಿ ಹಾಗೂ ಅಧಿಕಾರೇತರರ ವಿವರ ಮತ್ತು ಸಹಿ ಪಡೆಯುವುದು.

"ಮಕ್ಕಳ ಗ್ರಾಮ ಸಭೆ"

ನಮೂನೆ-2 (ಮಕ್ಕಳ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಅನುಷ್ಠಾನಕ್ಕೆ ಕ್ರಿಯಾ ಯೋಜನೆ)

ಕ್ರಿಯಾ ಯೋಜನೆ------ವರ್ಷ

ಜಿಲ್ಲೆ : **ತಾಲ್ಲೂಕು:** **ಗ್ರಾಮ ಪಂಚಾಯತಿ:**

ಗ್ರಾಮಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆ

ಸಭೆ ನಡೆಸಲಾದ ಸ್ಥಳ: **ದಿನಾಂಕ:**

ಕ್ರ. ಸಂ	ಸಮಸ್ಯೆ / ಬೇಡಿಕೆ /ಪ್ರಶ್ನೆ	ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರ	ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಬೌಗೋಳಿಕ ಪ್ರದೇಶ/ಸ್ಥಳ	ಸಮಸ್ಯೆ/ಬೇಡಿಕೆ /ಪ್ರಶ್ನೆ ಬಗ್ಗೆ ತೆಗೆದುಕೊಳ್ಳಲಾದ ನಿರ್ಣಯ/ ಠರಾವು	ನಿರ್ಣಯ/ಠರಾವನ್ನು ಜಾರಿಗೊಳಿಸಬೇಕಾದ ಜವಾಬ್ದಾರಿ (ಇಲಾಖೆ ಮತ್ತು ಅಧಿಕಾರಿ)	ಜಾರಿಗೊಳಿಸಲು ನಿಗದಿಪಡಿಸಲಾದ ಕಾಲಾವಧಿ	ಷರಾ
1	2	3	4	5	6	6	7

ಕ್ಷೇತ್ರಗಳು: ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರ-ಶಿಕ್ಷಣ, ಆರೋಗ್ಯ, ರಕ್ಷಣೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ವಸತಿ, ಮಾನವ ಸಂಪನ್ಮೂಲ, ಇತರೆ

ದೃಡೀಕರಣ
ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ:
(ಹೆಸರು, ಸಹಿ ಮತ್ತು ಕಚೇರಿ ಸೀಲ್)
ಗ್ರಾಮ ಪಂಚಾಯತಿ ಅಧ್ಯಕ್ಷರು/ಆಡಳಿತಾಧಿಕಾರಿ:
(ಹೆಸರು, ಸಹಿ ಮತ್ತು ಕಚೇರಿ ಸೀಲ್)

ಅನುಬಂಧ-ಡಿ

ಪ್ರೀತಿಯ ಮಕ್ಕಳೇ ದಯವಿಟ್ಟು ಗಮನಿಸಿ!

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ





ಪ್ರತಿ ವರ್ಷ ನವೆಂಬರ್ 3ಂಗಳಲ್ಲಿ ನಾವು, ಹಳ್ಳಿಯಲ್ಲಿ, ಶಾಲೆಯಲ್ಲಿ ಮತ್ತು ನಿಮ್ಮ ಮನೆಯಲ್ಲಿ ಸಹ ಮಕ್ಕಳ ಜೀವನವನ್ನು ಉತ್ತಮಗೊಳಿಸಲು ಮಕ್ಕಳ ಗ್ರಾಮಸಭೆಗಳ ಮೂಲಕ ನಿಮ್ಮ ಸಮಸ್ಯೆಗಳನ್ನು ಹಾಗೂ ಸಲಹೆಗಳನ್ನು ಕೇಳಿಸಿಕೊಳ್ಳುತ್ತಿದ್ದೆವು.

ನೀವು ಯಾವುದಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?

- ನಿಮ್ಮ ಹಳ್ಳಿಯಲ್ಲಿ – ಮೂಲಭೂತ ಸೌಲಭ್ಯಗಳಾದ ನೀರಿನ ಸಮಸ್ಯೆಗಳು, ನೈರ್ಮಲ್ಯದ ಸಮಸ್ಯೆಗಳು, ಶಾಲೆ ಅಥವಾ ಅಂಗನವಾಡಿ ಸೌಲಭ್ಯಗಳು, ಮುಂತಾದವುಗಳು?
- ಮನೆಯಲ್ಲಿ – ನಿಮಗೆ ಪೌಷ್ಟಿಕ ಆಹಾರ ದೊರೆಯುತ್ತಿದೆಯೇ? ನೀವು ಆರೋಗ್ಯವಾಗಿದ್ದೀರಾ? ನಿಮಗೆ ಆತಂಕವಾಗುತ್ತಿದೆಯೇ ಅಥವಾ ನಿಮ್ಮನ್ನು ನಿರ್ಲಕ್ಷಿಸಲಾಗುತ್ತಿದೆಯೇ ಅಥವಾ ಯಾವುದಾದರೂ ರೀತಿಯಲ್ಲಿ ನೋವಾಗುತ್ತಿದೆಯೇ?



ನಿಮ್ಮ ಸುತ್ತಲೂ ನೋಡಿ!	ನಿಮ್ಮ ಹಳ್ಳಿಯಲ್ಲಿನ ಸಮಸ್ಯೆಗಳ ಬಗ್ಗೆ ಆಲೋಚಿಸಿ.	ಮನೆಯಲ್ಲಿನ ಸಮಸ್ಯೆಗಳು	ನಿಮ್ಮ ಸುರಕ್ಷತೆ ಹಾಗೂ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳು (ನಿಂದನೆ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಇತರೆ ಯಾವುದೇ ಕಷ್ಟಗಳು)	ನಿಮಗೆ ತೊಂದರೆ ಉಂಟು ಮಾಡುತ್ತಿರುವ ಯಾವುದಾದರೂ ಸಮಸ್ಯೆಗಳು.

ಮಕ್ಕಳ ಕೋರಿಕೆ ಪತ್ರ

- ಯಾವುದೇ ಅಂಗನವಾಡಿ ಶಿಕ್ಷಕರು ಅಥವಾ ನಿಮ್ಮ ಶಾಲಾ ಮುಖ್ಯಶಿಕ್ಷಕರಿಂದ ಮಕ್ಕಳ ಕೋರಿಕೆ ಪತ್ರವನ್ನು ಪಡೆಯಿರಿ ಹಾಗೂ ಅದರಲ್ಲಿ ನಿಮ್ಮ ಸಮಸ್ಯೆಗಳನ್ನು ಭರ್ತಿ ಮಾಡಿ.
- ನಿಮ್ಮ ಕೋರಿಕೆ ಪತ್ರವನ್ನು ನಿಮ್ಮ ಶಾಲೆಯ ಮುಖ್ಯಶಿಕ್ಷಕರು ಅಥವಾ ಅಂಗನವಾಡಿ ಶಿಕ್ಷಕರಿಗೆ ಹಿಂತಿರುಗಿಸಿ.
- ನಿಮ್ಮ ಹತ್ತಿರದ ಶಾಲೆಯಲ್ಲಿ / ಅಂಗನವಾಡಿಯಲ್ಲಿ / ಡೈರಿ ಕೇಂದ್ರ / ಪಂಚಾಯತ್ ಕಚೇರಿ / ರೇಷನ್ ಅಂಗಡಿ (ನ್ಯಾಯಬೆಲೆ ಅಂಗಡಿ), ಅಂಚೆ ಕಚೇರಿ ಅಥವಾ ಬ್ಯಾಂಕ್ ಈ ಸ್ಥಳದಲ್ಲಿ ಇಟ್ಟಿರುವ ಮಕ್ಕಳ ಧ್ವನಿ ಪೆಟ್ಟಿಗೆಯಲ್ಲಿ ಹಾಕಿ.



ಮಕ್ಕಳ ಧ್ವನಿ ಪೆಟ್ಟಿಗೆ



ಮಕ್ಕಳೇ - ನಿಮ್ಮ ಸಮಸ್ಯೆಗಳು / ಸಲಹೆಗಳನ್ನು / ಪ್ರಶ್ನೆಗಳನ್ನು ಒಂದು ಹಾಳೆಯಲ್ಲಿ ಬರೆದು, ಅದನ್ನು ಈ ಮಕ್ಕಳ ಧ್ವನಿ ಪೆಟ್ಟಿಗೆಯಲ್ಲಿ ಹಾಕಿ.

ಅನುಬಂಧ- ಇ

ಮಕ್ಕಳ ಕೋರಿಕೆ ಪತ್ರ

ನಿಮ್ಮ ಸಮಸ್ಯೆಗಳು/ಸಲಹೆಗಳನ್ನು /ಪ್ರಶ್ನೆಗಳನ್ನು ಇಲ್ಲಿ ಹಂಚಿಕೊಳ್ಳಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಪ್ರೀತಿಯ ಮಕ್ಕಳೇ, ನಾನು **ನಿಮ್ಮ ಪಂಚಾಯತ್ ಬಾಲಮಿತ್ರ!** ನಿಮ್ಮ ಯೋಗಕ್ಷೇಮ ನನ್ನ ಆದ್ಯತೆಯಾಗಿದೆ! ನಾವು ನಿಮ್ಮನ್ನು ತಲುಪಲು ಹಾಗೂ ನಿಮ್ಮ ಸಮಸ್ಯೆಗಳನ್ನು ಕೇಳಿಸಿಕೊಳ್ಳಲು ಹೊಸ ಮಾರ್ಗದೊಂದಿಗೆ ಬಂದಿರುವೆವು!

ನೀವು ಯಾವುದಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?

- **ನಿಮ್ಮ ಹಳ್ಳಿಯಲ್ಲಿ -** ಮೂಲಭೂತ ಸೌಲಭ್ಯಗಳಾದ ನೀರಿನ ಸಮಸ್ಯೆಗಳು, ನೈರ್ಮಲ್ಯದ ಸಮಸ್ಯೆಗಳು, ಶಾಲೆ ಅಥವಾ ಅಂಗನವಾಡಿ ಸೌಲಭ್ಯಗಳು ಮುಂತಾದವುಗಳು?
- **ಮನೆಯಲ್ಲಿ -** ನಿಮಗೆ ಪೌಷ್ಟಿಕ ಆಹಾರ ದೊರೆಯುತ್ತಿದೆಯೇ? ನೀವು ಆರೋಗ್ಯವಾಗಿದ್ದೀರಾ? ನಿಮಗೆ ಆತಂಕವಾಗುತ್ತಿದೆಯೇ ಅಥವಾ ನಿಮ್ಮನ್ನು ನಿರ್ಲಕ್ಷಿಸಲಾಗುತ್ತಿದೆಯೇ ಅಥವಾ ಯಾವುದಾದರೂ ರೀತಿಯಲ್ಲಿ ನೋವಾಗುತ್ತಿದೆಯೇ?



ನಿಮಗೆ ಅಥವಾ ನಿಮಗೆ ಗೊತ್ತಿರುವ ಮಗುವು ತೊಂದರೆಯಲ್ಲಿದ್ದರೆ, 1098ಕ್ಕೆ ಕರೆ ಮಾಡಿ. ನೀವು ಬಯಸಿದರೆ ನಾವು ನಿಮ್ಮ ಗುರುತನ್ನು ಗೋಪ್ಯವಾಗಿರಿಸುತ್ತೇವೆ.

- ನಿಮ್ಮ ಸಮಸ್ಯೆಗಳನ್ನು ಮಕ್ಕಳ ಕೋರಿಕೆ ಪತ್ರದಲ್ಲಿ ಭರ್ತಿ ಮಾಡಿ ನಿಮ್ಮ ಅಂಗನವಾಡಿ ಶಿಕ್ಷಕರು ಅಥವಾ ನಿಮ್ಮ ಶಾಲಾ ಮುಖ್ಯಶಿಕ್ಷಕರಿಗೆ ಹಿಂತಿರುಗಿಸಿ ಅಥವಾ ನಿಮಗೆ ಹತ್ತಿರವಿರುವ ಮಕ್ಕಳ ಧ್ವನಿ ಪೆಟ್ಟಿಗೆಯಲ್ಲಿ ಹಾಕಬಹುದು!
- ನಿಮ್ಮ ಸಮಸ್ಯೆಗಳು/ಸಲಹೆಗಳನ್ನು ಯಾವುದಾದರು ಹಾಳೆಯಲ್ಲಿ ಕೂಡ ಬರೆದು ಅದನ್ನು ನಿಮಗೆ ಹತ್ತಿರವಿರುವ ಮಕ್ಕಳ ಧ್ವನಿ ಪೆಟ್ಟಿಗೆಯಲ್ಲಿ ಹಾಕಬಹುದು!

ಮಕ್ಕಳ ಧ್ವನಿ ಪೆಟ್ಟಿಗೆಯನ್ನು ಶಾಲೆಯಲ್ಲಿ / ಅಂಗನವಾಡಿಯಲ್ಲಿ / ಡ್ಕರಿ ಕೇಂದ್ರ / ಪಂಚಾಯತ್ ಕಚೇರಿ / ರೇಷನ್ ಅಂಗಡಿ (ನ್ಯಾಯಬೆಲೆ ಅಂಗಡಿ), ಅಂಚೆ ಕಚೇರಿ ಅಥವಾ ಬ್ಯಾಂಕ್‌ಗಳಲ್ಲಿ ಇಡಲಾಗಿದೆ.

ಮಕ್ಕಳು ಹುಟ್ಟುತ್ತಲೇ ಪ್ರಜೆಗಳು! ನೀವು ಒಬ್ಬ ಸಕ್ರಿಯ ನಾಗರಿಕರಾಗಲು, ಬೆಳೆದು ದೊಡ್ಡವರಾಗಲೇಬೇಕೆಂದಿಲ್ಲ!

ಗ್ರಾಮ ಪಂಚಾಯತಿಯ ಹೆಸರು: _____ ಕೋರಿಕೆ ನಮೂನೆಯ ಸಂಖ್ಯೆ: [ಬಾಲಮಿತ್ರ ತುಂಬಬೇಕಾದ ವಿವರ]

ಹಳ್ಳಿಯ ಹೆಸರು: _____ ತಾಲ್ಲೂಕು : _____ ಜಿಲ್ಲೆ : _____

ನಿಮ್ಮ ಹೆಸರು (ನಿಮಗೆ ಇಷ್ಟವಿದ್ದರೆ ಮಾತ್ರ ಬರೆಯಿರಿ) : _____

ನಿಮ್ಮ ವಿಳಾಸ (ನಿಮಗೆ ಇಷ್ಟವಿದ್ದರೆ ಮಾತ್ರ): _____ _____

ನಿಮ್ಮ ಕೋರಿಕೆ / ಸಮಸ್ಯೆ (ಪತ್ರದ ಹಿಂಬದಿಯಲ್ಲೂ ಬರೆಯಬಹುದು):_____ _____ _____ _____

_____

_____

_____

ಸಮಸ್ಯೆಯು ನಿಮ್ಮ ಪ್ರದೇಶದ ಮೂಲ ಸೌಕರ್ಯಕ್ಕೆ ಸಂಬಂಧಿಸಿದ್ದಾಗಿದ್ದಲ್ಲಿ, ನಿಮ್ಮ ಸರಿಯಾದ ವಿಳಾಸ ಮತ್ತು ಸ್ಥಳದ ವಿವರಗಳನ್ನು ನೀಡುವುದನ್ನು ಖಚಿತಪಡಿಸಿಕೊಳ್ಳಿ.

ದಿನಾಂಕ : _____ ನಿಮ್ಮ ಸಹಿ _____

ಬಾಲಮಿತ್ರ ತುಂಬಬೇಕಾದ ವಿವರ
ಕೋರಿಕೆ ನಮೂನೆಯ ಸಂಖ್ಯೆ:

ಬಾಲಮಿತ್ರರ ಸಹಿ ಮತ್ತು ಮೊಹರು